# ನಗರಸಭಾ ಕಾರ್ಯಾಲಯ, ಮಂಡ್ಯ.

ಸಂಖ್ಯೆ: ನಸಮಂ/ಸಭೆ/7/2008–09. ದಿನಾಂಕ:31–01–2009.

## ಸಾಮಾನ್ಯ ಸಭೆ

**ದಿನಾಂಕ:31–1–2009ರಂದು ಶನಿವಾರ ಬೆಳಿಗ್ಗೆ 11–00 ಗಂಟೆಗೆ** ಸರಿಯಾಗಿ ಮಂಡ್ಯ ನಗರಸಭಾ ಕಾರ್ಯಾಲಯದ ಶ್ರೀ ಧರಣಪ್ಪ ಸಭಾಂಗಣದಲ್ಲಿ ಮಾನ್ಯ ನಗರಸಭಾ ಅಧ್ಯಕ್ಷರು(ಪ್ರಭಾರ) ರವರ ಅಧ್ಯಕ್ಷತೆಯಲ್ಲಿ ನಡೆದ ನಗರಸಭೆ ಸಾಮಾನ್ಯ ಸಭೆ ನಡವಳಿಕೆಗಳು.

ಹಾಜರಿ:32 ಗೈರುಹಾಜರಿ:2 ಖಾಲಿ:1 ಒಟ್ಟು:35

ಸಭೆ ಪ್ರಾರಂಭಕ್ಕೆ ಮುನ್ನ ಭಾರತದ ಮಾಜಿ ಪ್ರಧಾನ ಮಂತ್ರಿಗಳಾದ ಶ್ರೀ.ವಿ.ಪಿ.ಸಿಂಗ್ ಮತ್ತು ಭಾರತದ ಮಾಜಿ ರಾಷ್ಟ್ರಪತಿಗಳಾದ ಶ್ರೀ.ಆರ್.ವೆಂಕಟರಾಮನ್ ರವರುಗಳು ನಿಧನರಾಗಿದ್ದು ಸದರಿಯವರುಗಳ ಆತ್ಮಕ್ಕೆ ಶಾಂತಿ ಕೋರಿ ಸಭೆಯಲ್ಲಿ 2 ನಿಮಿಷಗಳ ಕಾಲ ಮೌನ ಆಚರಿಸಲಾಯಿತು.

**ವಿಷಯ: 1:–** ಹಿಂದಿನ ಸಭೆ ನಡವಳಿಕೆಗಳನ್ನು ಓದಿ ರೆಕಾರ್ಡು ಮಾಡುವ ವಿಚಾರ.

**ತೀರ್ಮಾನ:1:–** ಸದಸ್ಯರುಗಳಾದ ಶ್ರೀ.ಕೆ.ಎಲ್.ನಾಗೇಂದ್ರರವರು ಮತ್ತು ಶ್ರೀ.ಎಂ.ಎಲ್.ಮಂಜುನಾಥ್‌ರವರು ಮಾತನಾಡುತ್ತಾ ಪ್ರಭಾರ ಅಧ್ಯಕ್ಷರ ಅವಧಿಯಲ್ಲಿ ಸಾರ್ವಜನಿಕ ಹಿತದೃಷ್ಟಿ ಹಾಗೂ ನಗರದ ಅಭಿವೃದ್ಧಿ ಸಲುವಾಗಿ 2009–10ನೇ ಸಾಲಿಗೆ ಸರ್ಕಾರದಿಂದ ಬಿಡುಗಡೆಯಾಗಲಿರುವ ಎಸ್.ಎಫ್.ಸಿ.ಮುಕ್ತ ನಿಧಿ ಅನುದಾನದಲ್ಲಿ ಪ್ರತೀ ವಾರ್ಡ್‌ಗೆ ತಲಾ 10.00ಲಕ್ಷ ರೂಪಾಯಿಗಳ ಅಭಿವೃದ್ಧಿ ಕಾಮಗಾರಿಗಳಿಗಾಗಿ ಅನುದಾನವನ್ನು ವಿನಿಯೋಗಿಸುವಂತೆ ಸಂಬಂಧಪಟ್ಟ ವಾರ್ಡ್ ಸದಸ್ಯರಿಂದ ಕಾಮಗಾರಿ ಮಾಹಿತಿ ಪಡೆದು ಅಂದಾಜು ಪಟ್ಟಿಗಳನ್ನು ತಯಾರಿಸಿ ಮಾನ್ಯ ಜಿಲ್ಲಾಧಿಕಾರಿಗಳಿಂದ ಆಡಳಿತಾತ್ಮಕ ಅನುಮೋದನೆ ಪಡೆದು ನಂತರ ಟೆಂಡರ್ ಪ್ರಕ್ರಿಯೆ ಕೈಗೊಂಡು ಕಾರ್ಯಾದೇಶ ನೀಡಿ ಪಾರದರ್ಶಕ ನಿಯಮಾನುಸಾರ ಉತ್ತಮ ಗುಣಮಟ್ಟದ ಕಾಮಗಾರಿಗಳನ್ನು ನಿರ್ವಹಿಸಲು ಶೀಘ್ರ ಕ್ರಮ ವಹಿಸಲು ಕೋರಿದ್ದರ ಮೇರೆಗೆ ಮಾನ್ಯ ಪ್ರಭಾರ ಅಧ್ಯಕ್ಷರು ಪ್ರತೀ ವಾರ್ಡ್‌ಗೆ ತಲಾ 10.00ಲಕ್ಷ ರೂಪಾಯಿಗಳ ಅನುದಾನವನ್ನು ವಾರ್ಡ್‌ಗಳಲ್ಲಿನ ಅಭಿವೃದ್ಧಿ ಕೆಲಸ ಕಾರ್ಯಗಳಿಗಾಗಿ ಸದಸ್ಯರುಗಳ ಸಲಹೆ ಮೇರೆಗೆ ಮಂಜೂರು ಮಾಡಿರುವುದಾಗಿ ಘೋಷಿಸಿದರು.

ಹಿಂದಿನ ಸಭೆಯ ದಿನಾಂಕ:25–8–2008ರ ವಿಷಯ 8ನ್ನು ಮುಂದೂಡಿ ಉಳಿದಂತೆ ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ರೆಕಾರ್ಡು ಮಾಡಲಾಯಿತು. ಹಾಗೂ ದಿನಾಂಕ:25–8–2008ರ ಸಾಮಾನ್ಯ ಸಭೆ ವಿಷಯ ಸಂಖ್ಯೆ:1ರಲ್ಲಿ ಟೆಂಡರ್‌ಗಳನ್ನು ಅನುಮೋದಿಸುವ ಅಧಿಕಾರವನ್ನು ಅಧ್ಯಕ್ಷರಿಗೆ ನೀಡಿದ್ದರ ಮೇರೆಗೆ ಮಾನ್ಯ ಅಧ್ಯಕ್ಷರು ಎಲ್ಲಾ ಟೆಂಡರ್‌ಗಳಿಗೂ ಅಂದಾಜು ಮೊತ್ತಕ್ಕಿಂತ ಶೇ.8% ಹೆಚ್ಚುವರಿಯಾಗಿ ಟೆಂಡರ್ ಪ್ರೀಮಿಯಂ ನೀಡಿರುವುದನ್ನು ಸಭೆಯಲ್ಲಿ ಒಪ್ಪಲಾಯಿತು.

**ವಿಷಯ: 2:–** ಸರ್ಕಾರದಿಂದ ಬಂದಿರುವ ಸುತ್ತೋಲೆಗಳನ್ನು ಓದಿ ರೆಕಾರ್ಡು ಮಾಡುವ ವಿಚಾರ.

**ತೀರ್ಮಾನ:2:–** 1) ಸುತ್ತೋಲೆ ಸಂಖ್ಯೆ:ನಅಇ/60/ಎಸ್.ಎಫ್.ಸಿ.2007 ದಿನಾಂಕ:10–10–2008ರಲ್ಲಿ ಹನ್ನೆರಡನೇ ಹಣಕಾಸು ಆಯೋಗದ ಶಿಫಾರಸ್ಸಿನಂತೆ ರಸ್ತೆ ಮತ್ತು ಸೇತುವೆಗಳ ಅಭಿವೃದ್ಧಿಗಾಗಿ ಬಿಡುಗಡೆಯಾಗಿರುವ 54.00ಲಕ್ಷ ರೂಪಾಯಿಗಳ ಅನುದಾನ.

2) ಸುತ್ತೋಲೆ ಸಂಖ್ಯೆ:ನಅಇ.30.ಎಸ್.ಎಫ್.ಸಿ.2008 ದಿನಾಂಕ:15–1–2009ರಲ್ಲಿ ಎಸ್.ಎಫ್.ಸಿ.ಅನುದಾನದ ಮುಕ್ತ ನಿಧಿ ಅನುದಾನದ 3ನೇ ಕಂತು ಬಾಬ್ತು 99,79,500–00 ರೂಪಾಯಿಗಳು ಹಾಗೂ 11,10,000–00 ರೂಪಾಯಿಗಳನ್ನು ಕೆ.ಯು.ಐ.ಡಿ.ಎಫ್.ಸಿ.ಸಾಲಕ್ಕೆ ಕಡಿತಗೊಲಿಸಿಕೊಂಡಿರುವ ಬಾಬ್ತು.
ಸುತ್ತೋಲೆ ಪತ್ರಗಳನ್ನು ಓದಿ ರೆಕಾರ್ಡು ಮಾಡಲಾಯಿತು.

ಮಾನ್ಯ ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ, ಮಂಡ್ಯರವರ ಪತ್ರದ ಸಂಖ್ಯೆ:ಮುನಿಸಿ(1)139/2008–09 ದಿನಾಂಕ: 20–01–2009 ರಂತೆ ಮಂಡ್ಯ ನಗರಸಭೆ ನಿಧಿಯಿಂದ ನಿರ್ಮಿಸಿರುವ ವಿ.ವಿ.ರಸ್ತೆಯಲ್ಲಿರುವ ಅಂಗಡಿ ಮಳಿಗೆಗಳನ್ನು ಪೌರಾಡಳಿತ ನಿರ್ದೇಶನಾಲಯದ ಸುತ್ತೋಲೆಕ ರೀತ್ಯಾ ಬಹಿರಂಗ ಹರಾಜು ಮೂಲಕ ವಿಲೆ ಮಾಡಲು ಸೂಚಿಸಿರುವುದನ್ನು. ಸಭೆಯಲ್ಲಿ ಓದಲಾಯಿತು.

**ವಿಷಯ:3:–** 2008ನೇ ಆಗಸ್ಟ್, ಸೆಪ್ಟೆಂಬರ್, ಅಕ್ಟೋಬರ್, ನವೆಂಬರ್ ಮತ್ತು ಡಿಸೆಂಬರ್ ಮಾಹೆಗಳ ಜಮ ಖರ್ಚುಗಳನ್ನು ಓದಿ ರೆಕಾರ್ಡು ಮಾಡುವ ವಿಚಾರ.

**ತೀರ್ಮಾನ:3:–** 2008ನೇ ಆಗಸ್ಟ್, ಸೆಪ್ಟೆಂಬರ್, ಅಕ್ಟೋಬರ್, ನವೆಂಬರ್ ಮತ್ತು ಡಿಸೆಂಬರ್ ಮಾಹೆಗಳ ಜಮೆ ಖರ್ಚುಗಳನ್ನು ಓದಿ, ಒಪ್ಪಿ ಅನುಮೋದಿಸಲಾಯಿತು.

**ವಿಷಯ:4:–** ದಿನಾಂಕ:25–8–2008ರ ನಗರಸಭಾ ಸಾಮಾನ್ಯ ಅಧಿವೇಶನ ವಿಷಯ ಸಂಖ್ಯೆ:2ರಲ್ಲಿ ಸರ್ಕಾರದ ಸುತ್ತೋಲೆ ಸಂಖ್ಯೆ:ನಅಇ/21/ಎಸ್‌ಎಫ್‌ಸಿ/2008 ಬೆಂಗಳೂರು ದಿನಾಂಕ:22–7–2008ರ ಸುತ್ತೋಲೆ ಆದೇಶ ದಂತೆ ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ಪುನರ್ ಪರಿಶೀಲಿಸಿ ಹಾಗೂ ಶೇಕಡ 18ರ ಕ್ರಿಯಾ ಯೋಜನೆ ಯನ್ನು ತಯಾರಿಸಿ ಮಂಜೂರಾತಿಗಾಗಿ ಮಾನ್ಯ ಜಿಲ್ಲಾಧಿಕಾರಿಗಳು, ಮಂಡ್ಯರವರಿಗೆ ಸಲ್ಲಿಸುವುದರ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:4:–** ಮಾನ್ಯ ಜಿಲ್ಲಾಧಿಕಾರಿಗಳು, ಮಂಡ್ಯರವರ ಪತ್ರ ಸಂಖ್ಯೆ:ಮುನಿಸಿ(3)26/2008–09 ದಿನಾಂಕ:7–10–2008ರಲ್ಲಿ ನಗರಸಭೆ ಸಾಮಾನ್ಯ ಅಧಿವೇಶನ 25–8–2008ರ ವಿಷಯ ಸಂಖ್ಯೆ:2ರಲ್ಲಿ 1 ರಿಂದ 38ರವರೆಗಿನ ಕಾಮಗಾರಿಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡಿ ತುರ್ತಾಗಿ ಜಿಲ್ಲಾಧಿಕಾರಿಗಳಿಂದ ಆಡಳಿತಾತ್ಮಕ ಅನುಮೋದನೆ ಪಡೆದು ಕಾಮಗಾರಿ ನಿರ್ವಹಿಸಲು ತೀರ್ಮಾನಿಸಿದ್ದರ ಮೇರೆಗೆ ದಿನಾಂಕ:24–9–2008ರಂದು ಜಿಲ್ಲಾಧಿಕಾರಿಗಳವರಿಗೆ ಆಡಳಿತಾತ್ಮಕ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸಲಾಗಿ, ಸದರಿ ಪ್ರಸ್ಥಾವನೆಗೆ ಮಾನ್ಯ ಜಿಲ್ಲಾಧಿಕಾರಿಗಳು ಮೇಲ್ಕಂಡ ಅಧಿಕೃತಜ್ಞಾಪನದಲ್ಲಿ ಸಿವಿಲ್ ಕಾಮಗಾರಿ ಗಳನ್ನು 4 ಪ್ಯಾಕೇಜ್‌ಗಳಾಗಿ ಮಾರ್ಪಾಡು ಮಾಡಿ ಪ್ಯಾಕೇಜ್ ಸಂಖ್ಯೆ ಕ್ರಮವಾಗಿ (1),(2),(3) ಪ್ಯಾಕೇಜ್‌ಗಳ ತಲಾ ಅಂದಾಜು 54.00ಲಕ್ಷ ಮತ್ತು (4)ನೇ ಪ್ಯಾಕೇಜ್ ಅಂದಾಜು ಮೊತ್ತ 60ಲಕ್ಷಗಳೆಂದು ಹಾಗೂ ಹೈಮಾಸ್ಟ್ ದೀಪಗಳನ್ನು ಅಳವಡಿಸುವ ಕಾಮಗಾರಿಯನ್ನು 5ನೇ ಪ್ಯಾಕೇಜ್ ಎಂದು ಪರಿಗಣಿಸಿ ಅಂದಾಜು ಮೊತ್ತ 66ಲಕ್ಷಗಳಾಗಿರುತ್ತಾರೆ. ಅಂದಾಜಿನ ಮೊತ್ತಕ್ಕೆ ಅನುಗುಣವಾಗಿ ಅಂದಾಜು ತಯಾರಿಸಿ 5 ದಿವಸಗಳ ಒಳಗೆ ಸಲ್ಲಿಸಿ ಸಕ್ಷಮ ಪ್ರಾಧಿಕರದಿಮದ ತಾಂತ್ರಿಕ ಅನುಮೋದನೆಯನ್ನು ಕಡ್ಡಾಯವಾಗಿ ಪಡೆಯುವಂತೆ ಷರತ್ತು ವಿಧಿಸಿ ಅನುಮೋದನೆ ನೀಡಿರುತ್ತಾರೆ.

ದಿನಾಂಕ:13–11–2008ರ ತುರ್ತು ವಿಶೇಷ ಸಭೆಯಲ್ಲಿ ವಿಷಯ ಸಂಖ್ಯೆ:1ರಲ್ಲಿ ಪ್ಯಾಕೇಜ್ ರೀತ್ಯಾ ಕಾಮಗಾರಿ ನಿರ್ವಹಿಸುವುದನ್ನು ಕೈಬಿಟ್ಟು ವಾರ್ಡ್‌ವಾರು ಪ್ರತ್ಯೇಕ ಕಾಮಗಾರಿ ನಿರ್ವಹಿಸಲು ಅನುಮೋದನೆ ನೀಡುವಂತೆ ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಲು ತೀರ್ಮಾನಿಸಲಾಗಿತ್ತು. ಅದರಂತೆ ಪ್ರಸ್ತಾವನೆ ಸಲ್ಲಿಸಲಾಯಿತು.

ಈ ತಹಲ್‌ವರೆವಿಗೂ ಮಾನ್ಯ ಜಿಲ್ಲಾಧಿಕಾರಿಗಳವರಿಂದ ಯಾವುದೇ ಮಾರ್ಪಾಡು ಆದೇಶ ಬಂದಿಲ್ಲವಾದ್ದರಿಂದ ಮೇಲ್ಕಂಡ ಪ್ರಸ್ತಾವನೆಯನ್ನು ಪುನರ್ ಪರಿಶೀಲಿಸಲಾಗಿ ಪ್ರತೀ ಎರಡು ವಾರ್ಡ್‌ಗಳನ್ನು ಅಥವಾ ಪ್ರತಿ 12ಲಕ್ಷಗಳ ಪ್ಯಾಕೇಜ್ ರೀತ್ಯಾ ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ಮಾರ್ಪಡಿಸಿ ಹಾಗೂ ಹೈಮಾಸ್ಟ್ ದೀಪಗಳ ಕಾಮಗಾರಿಗಳನ್ನು ಪ್ರತೀ ಎರಡು ಸಂಖ್ಯೆ ಹೈಮಾಸ್ಟ್ ದೀಪಗಳ ಕಾಮಗಾರಿಗಳನ್ನು ಅಥವಾ ಪ್ರತಿ ರೂ.12ಲಕ್ಷಗಳ ಪ್ಯಾಕೇಜ್ ರೀತ್ಯಾ ಪರಿಗಣಿಸಿ ಕ್ರಿಯಾ ಯೋಜನೆಯನ್ನು ಜಿಲ್ಲಾಧಿಕಾರಿಗಳವರಿಗೆ ಮೇಲ್ಕಂಡ ಆದೇಶವನ್ನು ಪುನರ್ ಪರಿಶೀಲಿಸಿ ಪ್ರಸ್ತಾವನೆಯನ್ನು ಜಿಲ್ಲಾಧಿಕಾರಿಗಳವರಿಗೆ ಸಲ್ಲಿಸುವಂತೆ ಹಾಗೂ ತುರ್ತಾಗಿ ಕ್ರಿಯಾ ಯೋಜನೆಗೆ ಅನುಮೋದನೆ ನೀಡಿ ಮಾರ್ಪಾಡು ಆದೇಶ ನೀಡುವಂತೆ ಅಲ್ಪಾವಧಿ ಟೆಂಡರ್ ಕರೆಯಲು ಅನುಮತಿ ನೀಡುವಂತೆ ಜಿಲ್ಲಾಧಿಕಾರಿಗಳುರವರನ್ನು ಕೋರಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

## ನಗರಸಭಾ ಕಾರ್ಯಾಲಯ, ಮಂಡ್ಯ.

**2008–09ನೇ ಸಾಲಿನ ಕರ್ನಾಟಕ ರಾಜ್ಯ ಹಣಕಾಸು ಆಯೋಗದಿಂದ ಬಿಡುಗಡೆಯಾಗಲಿರುವ ಮುಕ್ತ ನಿಧಿ ವಿನಿಯೋಗಕ್ಕಾಗಿ ತಯಾರಿಸಿರುವ ಕ್ರಿಯಾ ಯೋಜನೆ ವಿವರ.**

| ಪ್ಯಾಕೇಜ್ ಸಂಖ್ಯೆ | ವಾರ್ಡ್ ಸಂಖ್ಯೆ | ಕಾಮಗಾರಿಗಳ ವಿವರ | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) | ಪ್ಯಾಕೇಜ್ ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|---|
| 1 | 2 | 3 | 4 | 5 |
| 1 | 1 | ಎಸ್.ಎಲ್.ಜೆ.ರಸ್ತೆಯ ಉತ್ತರಕ್ಕೆ (ಮಸೀದಿ ಮುಂಭಾಗ) ಆರ್.ಸಿ.ಸಿ.ಚರಂಡಿ ನಿರ್ಮಾಣ. | 6.00 | 12.00 |
| | 2 | ಮಂಡ್ಯ ಪ್ರೆಸ್ ಮುಂಭಾಗದ ರಸ್ತೆಯಲ್ಲಿ (ದಕ್ಷಿಣಕ್ಕೆ) ಆರ್.ಸಿ.ಸಿ.ಚರಂಡಿ ನಿರ್ಮಾಣ. | 6.00 | |
| 2 | 3 | ರೈಲ್ವೆ ಲೈನ್ ಪಕ್ಕದ ರಸ್ತೆ ಅಭಿವೃದ್ಧಿ | 3.00 | 12.00 |
| | 3 | ರೈಲ್ವೆ ಲೈನ್ ಪಕ್ಕದ ರಸ್ತೆಯಲ್ಲಿ ಆರ್.ಸಿ.ಸಿ.ಚರಂಡಿ ನಿರ್ಮಾಣ | 3.00 | |
| | 4 | ಶಂಕರಮಠದ ರಸ್ತೆಯಲ್ಲಿ ಆರ್.ಸಿ.ಸಿ.ಚರಂಡಿ ನಿರ್ಮಾಣ. | 6.00 | |
| 3 | 5 | ಬಂದೀಗೌಡ ಬಡಾವಣೆಯಲ್ಲಿ ರಸ್ತೆ ಅಭಿವೃದ್ಧಿ | 6.00 | 12.00 |
| | 6 | ಹಳೇ ಕಲ್ಲಹಳ್ಳಿ ರಸ್ತೆಗಳಲ್ಲಿ ಆರ್.ಸಿ.ಸಿ.ಚರಂಡಿ ನಿರ್ಮಾಣ. | 6.00 | |
| 4 | 7 | ವಿ.ವಿ.ನಗರ ಎ.ಪಿ.ಎಂ.ಸಿ.ರಸ್ತೆ ಪಶ್ಚಿಮಕ್ಕೆ ಇರುವ 10 ಮತ್ತು 11ನೇ ಕ್ರಾಸ್ ರಸ್ತೆಗಳಿಗೆ ಮೆಟಲಿಂಗ್ ಮಾಡುವುದು. | 6.00 | 12.00 |
| | 8 | ಮರೀಗೌಡ ಬಡಾವಣೆ 2ನೇ ಕ್ರಾಸ್ ರಸ್ತೆಗೆ ಮೆಟಲಿಂಗ್ ಮಾಡಿ ಡಾಂಬರೀಕರಣ ಮಾಡುವುದು ಹಾಗೂ ಕಾಳೇಗೌಡ ಸ್ಕೂಲ್ ರಸ್ತೆ ಡಾಂಬರೀಕರಣ | 6.00 | |
| 5 | 8 | ಕಾಳೇಗೌಡ ಸ್ಕೂಲ್ ರಸ್ತೆಯಲ್ಲಿ ಆರ್.ಸಿ.ಸಿ.ಚರಂಡಿ ನಿರ್ಮಾಣ | 6.00 | 12.00 |
| | 9 | ಪೋಲೀಸ್ ವಸತಿ ಗೃಹದ ಆವರಣದಲ್ಲಿ ರಸ್ತೆ ಅಭಿವೃದ್ಧಿ. | 6.00 | |
| 6 | 10 | ಸುಭಾಷ್‌ನಗರ 4ನೇ ಕ್ರಾಸ್ ಎಂ.ಬಿ.ಶ್ರೀಕಾಂತ್‌ರವರ ಮನೆಯಿಂದ ಶ್ರೀನಿವಾಸರಾವ್ ಮನೆಯವರೆಗೆ ಆರ್.ಸಿ.ಸಿ.ಚರಂಡಿ ನಿರ್ಮಾಣ. | 6.00 | 12.00 |
| | 11 | ಗಾಂಧಿನಗರ ಉಪ್ಪಿನಕಾಯಿ ಪ್ರಸಾದ್ ಮನೆಯಿಂದ ಸ್ವಾತಿ ಹೋಟೆಲ್‌ವರೆಗೆ ಆರ್.ಸಿ.ಸಿ.ಚರಂಡಿ ನಿರ್ಮಾಣ. | 6.00 | |
| 7 | 12 | ಗಾಂಧಿನಗರ ಕ್ರಾಸ್ ರಸ್ತೆಗಳಲ್ಲಿ ಡಾಂಬರೀಕರಣ (ಪ್ರಯಾಗ್ ಮೋಟಾರ್ಸ್ ಪಕ್ಕದ ರಸ್ತೆ ಮತ್ತು ಗಾಂಧಿನಗರ 5ನೇ ಕ್ರಾಸ್) | 6.00 | 12.00 |
| | 13 | ಗಾಂಧಿನಗರ 6 ಮತ್ತು 7ನೇ ಕ್ರಾಸ್‌ನಲ್ಲಿ ಆರ್.ಸಿ.ಸಿ. ಮತ್ತು ಚಪ್ಪಡಿ ಚರಂಡಿ ನಿರ್ಮಾಣ. | 6.00 | |
| 8 | 14 | ಚಾಮುಂಡೇಶ್ವರಿ ನಗರ ಕೆ.ಎಸ್.ಬಸವರಾಜು ಮನೆಯಿಂದ ಮಾಸ್ಟರ್ ಗೋಪಾಲ್ ಮನೆಯವರೆಗೆ ರಸ್ತೆ ಅಭಿವೃದ್ಧಿ ಮತ್ತು ನಗರಸಭಾ ಸದಸ್ಯರ ಮನೆಯ ಮುಂಭಾಗ ಕಾಂಕ್ರೀಟ್ ರಸ್ತೆ ನಿರ್ಮಾಣ. | 6.00 | 12.00 |
| | 15 | ಕುವೆಂಪುನಗರದಲ್ಲಿ ರಸ್ತೆ ಅಭಿವೃದ್ಧಿ, | 3.00 | |
| | 15 | ಕುವೆಂಪುನಗರದಲ್ಲಿ ಆರ್.ಸಿ.ಸಿ.ಚರಂಡಿ ಮತ್ತು ಡೆಕ್ ಸ್ಲ್ಯಾಬ್ ನಿರ್ಮಾಣ. | 3.00 | |
| 9 | 16 | ಹೊಸಹಳ್ಳಿ ಕಾರಸವಾಡಿ ರಸ್ತೆಯ 1ನೇ ಕ್ರಾಸ್ ರಮೇಶ್‌ರವರ ಮನೆಯ ಮುಂಭಾಗ ಎರಡೂ ಬದಿಯಲ್ಲಿ ಆರ್.ಸಿ.ಸಿ.ಚರಂಡಿ ನಿರ್ಮಾಣ. | 6.00 | 12.00 |
| | 17 | ಹೌಸಿಂಗ್ ಬೋರ್ಡ್ ಕಾಲೋನಿ ಮೊದಲನೇ ಹಂತ ಆದರ್ಶ ಶಾಲೆಯ ಹಿಂಭಾಗ ಮಿಲಿಟರಿ ಶ್ರೀನಿವಾಸ್ ಮನೆ ಹತ್ತಿರ ಕಾಂಕ್ರೀಟ್ ರಸ್ತೆ ನಿರ್ಮಾಣ ಹಾಗೂ ಡೆಕ್ ಸ್ಲ್ಯಾಬ್ ನಿರ್ಮಾಣ. | 6.00 | |
| 10 | 18 | ಗಾಂಧಿನಗರ 4ನೇ ಕ್ರಾಸ್‌ನಲ್ಲಿ ಆರ್.ಸಿ.ಸಿ.ಚರಂಡಿ ನಿರ್ಮಾಣ. | 6.00 | 12.00 |
| | 19 | ಅಶೋಕನಗರ ಶಿವಪ್ರಕಾಶ್ ಬಾಬು ಮನೆಯ ಮುಂಭಾಗದ ರಸ್ತೆ ಅಭಿವೃದ್ಧಿ ಕಾಮಗಾರಿ. | 6.00 | |
| 11 | 20 | ಹೊಸಹಳ್ಳಿ ಹರಿಶ್ಚಂದ್ರ ಸರ್ಕಲ್ ವೃತ್ತದ 4ಕ್ರಾಸ್ ರಸ್ತೆಗಳ ಅಭಿವೃದ್ಧಿ ಮತ್ತು ಹೊಸಹಳ್ಳಿ ಟ್ಯಾಂಕ್ ಬಂಡ್ ರಸ್ತೆ ಅಭಿವೃದ್ಧಿ ಕಾಮಗಾರಿ. | 6.00 | 12.00 |
| | 21 | ಹಾಲಹಳ್ಳಿ 1ನೇ ಕ್ರಾಸ್ ಮತ್ತು ಹೊಸಹಳ್ಳಿ 4ನೇ ಕ್ರಾಸ್ ರಸ್ತೆ ಅಭಿವೃದ್ಧಿ ಕಾಮಗಾರಿ. | 6.00 | |

| 1 | 2 | 3 | 4 | 5 |
|---|---|---|---|---|
| 12 | 22 | ಹಾಲಹಳ್ಳಿಕೆರೆ ರಸ್ತೆಗೆ ಎರಡು ಬದಿಯಲ್ಲಿ ಆರ್.ಸಿ.ಸಿ.ಚರಂಡಿ ನಿರ್ಮಾಣ. | 6.00 | 12.00 |
| | 23 | ಮಸೀದಿಯ ಹತ್ತಿರ ಆರ್.ಸಿ.ಸಿ.ಚರಂಡಿ ಹಾಗೂ ಡೆಕ್ ಸ್ಲ್ಯಾಬ್ ಕಲ್ವರ್ಟ್ ನಿರ್ಮಾಣ | 6.00 | |
| 13 | 24 | ತಮಿಳು ಕಾಲೋನಿಯಲ್ಲಿ ಡ್ರೈನ್, ಕಾಂಪೌಂಡ್ ಮತ್ತು ಡೆಕ್ ಕಾಮಗಾರಿ. | 6.00 | 12.00 |
| | 25 | ಲೇಬರ್ ಕಾಲೋನಿಯಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ. | 6.00 | |
| 14 | 26 | ಸಫ್ದರಿಯಾ ಬಾದ್ ಮೊಹಲ್ಲಾದ ಟಿಪ್ಪು ರಸ್ತೆಯ ಮುಂಭಾಗ 1ನೇ ಕ್ರಾಸ್ ಮತ್ತು 2ನೇ ಕ್ರಾಸ್ ರಸ್ತೆಗಳಲ್ಲಿ ಆರ್.ಸಿ.ಸಿ.ಚರಂಡಿ ನಿರ್ಮಾಣ. | 6.00 | 12.00 |
| | 27 | ತಾವರೆಗೆರೆಯಲ್ಲಿ ರಸ್ತೆ ಅಭಿವೃದ್ಧಿಪಡಿಸುವುದು. | 3.00 | |
| | 27 | ತಾವರೆಗೆರೆಯಲ್ಲಿ ಆರ್.ಸಿ.ಸಿ.ಚರಂಡಿ ಹಾಗೂ ಡೆಕ್ ನಿರ್ಮಾಣ | 3.00 | |
| 15 | 28 | ಜಯಲಕ್ಷ್ಮಿ ಸಾಮಿಲ್ ಮುಂಭಾಗದ ಬಲಭಾಗದ 4 ರಸ್ತೆಗಳು ಅಭಿವೃದ್ಧಿ ಕಾಮಗಾರಿ. | 6.00 | 12.00 |
| | 28 | ಜಯಲಕ್ಷ್ಮಿ ಸಾಮಿಲ್ ಮುಂಭಾಗದ ರಸ್ತೆಯ ಎಡಭಾಗದ ರಸ್ತೆ ಅಭಿವೃದ್ಧಿಪಡಿಸು ವುದು | 6.00 | |
| 16 | 29 | ಗುತ್ತಲಿನ ಜಯಲಕ್ಷ್ಮಿ ಟಾಕೀಸ್ ಹಿಂಭಾಗ ಆರ್.ಸಿ.ಸಿ.ಡೆಕ್ ಹಾಗೂ ರಸ್ತೆ ಅಭಿವೃದ್ಧಿಪಡಿಸುವುದು. | 6.00 | 12.00 |
| | 30 | ಅರಕೇಶ್ವರನಗರದಲ್ಲಿ ರಸ್ತೆ ಅಭಿವೃದ್ಧಿಪಡಿಸುವುದು. | 3.00 | |
| | 30 | ಅರಕೇಶ್ವರನಗರದಲ್ಲಿ ಆರ್.ಸಿ.ಸಿ. ಸ್ಲ್ಯಾಬ್ ಕಲ್ವರ್ಟ್ ನಿರ್ಮಾಣ ಮತ್ತು ಆರ್.ಸಿ.ಸಿ. ಚರಂಡಿ ನಿರ್ಮಾಣ ಕಾಮಗಾರಿ | 3.00 | |
| 17 | 31 | ವಾರ್ಡ್ ನಂ.31ರ ಆಯ್ದ ರಸ್ತೆಗಳಲ್ಲಿ ರಸ್ತೆ ಅಭಿವೃದ್ಧಿಪಡಿಸುವುದು.. | 3.00 | 12.00 |
| | 31 | ವಾರ್ಡ್ ನಂ.31ರ ಆಯ್ದ ಸ್ಥಳಗಳಲ್ಲಿ ಚರಂಡಿ ನಿರ್ಮಾಣ. | 3.00 | |
| | 32 | ವಾರ್ಡ್ ನಂಬರ್:32ರ ಆಯ್ದ ರಸ್ತೆಗಳಲ್ಲಿ ರಸ್ತೆ ಅಭಿವೃದ್ಧಿಪಡಿಸುವುದು. . | 3.00 | |
| | 32 | ವಾರ್ಡ್ ನಂಬರ್:32ರ ಆಯ್ದ ಸ್ಥಳಗಳಲ್ಲಿ ಚರಂಡಿ ನಿರ್ಮಾಣ. | 3.00 | |
| 18 | 33 | ಸ್ವರ್ಣಸಂದ್ರ ಹರಿರಾಂ ರಸ್ತೆಯಲ್ಲಿ ಪಶ್ಚಿಮದ ಕಡೆಗೆ ಆರ್.ಸಿ.ಸಿ.ಚರಂಡಿ ನಿರ್ಮಾಣ (ಕೆ.ಹೆಚ್.ಬಿ. ಕಡೆಯಿಂದ) | 6.00 | 12.00 |
| | 34 | ಮಾರುತಿ ನಗರ 7ನೇ ಕ್ರಾಸ್ ರಸ್ತೆಯಲ್ಲಿ ಆರ್.ಸಿ.ಸಿ.ಚರಂಡಿ ನಿರ್ಮಾಣ. | 6.00 | |
| 19 | 35 | ದೇವೇಗೌಡನದೊಡ್ಡಿ ಮತ್ತು ಷುಗರ್ ಟೌನ್‌ನಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ ಹಾಗೂ ರಸ್ತೆ ಅಭಿವೃದ್ಧಿ. | 6.00 | 6.00 |
| | | **ಒಟ್ಟು** | **222.00** | **222.00** |

**ಮಂಡ್ಯ ನಗರದ ಈ ಕೆಳಕಂಡ ಸ್ಥಳಗಳಲ್ಲಿ ಹೈಮಾಸ್ಟ್ ದೀಪಗಳನ್ನು ಸರಬರಾಜು ಮಾಡಿ ಅಳವಡಿಸುವ ವಿವರ.**

| ಕ್ರ. ಸಂ | ಕಾಮಗಾರಿ ವಿವರ | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) | ಪ್ಯಾಕೇಜ್ ಮೊತ್ತ |
|---|---|---|---|
| 1 | ಮಂಡ್ಯ ನಗರದ ಷುಗರ್ ಫ್ಯಾಕ್ಟರ್ ಸರ್ಕಲ್‌ನಲ್ಲಿ ಹೈಮಾಸ್ಟ್ ದೀಪ ಸರಬರಾಜು ಮಾಡಿ ಅಳವಡಿಸುವುದು. | 6.00 | 12.00 |
| | –" ನಂದಾ ಸರ್ಕಲ್ –"– | 6.00 | |
| 2 | –"– ಮಹಾವೀರ ಸರ್ಕಲ್ –"– | 6.00 | 12.00 |
| | –"– ಸಂಜಯ ಸರ್ಕಲ್ –"– | 6.00 | |
| 3 | –"– ಕಲ್ಲಹಳ್ಳಿ ಸರ್ಕಲ್ –"– | 6.00 | 12.00 |
| | –"– ಹೊಳಲು ಸರ್ಕಲ್ –"– | 6.00 | |
| 4 | –"– ಅಂಬೇಡ್ಕರ್ ಸರ್ಕಲ್ –"– | 6.00 | 12.00 |
| | –"– ಕರ್ನಾಟಕ ಬಾರ್ ಸರ್ಕಲ್ –"– | 6.00 | |
| 5 | –"– ಹೊಸಹಳ್ಳಿ ಸರ್ಕಲ್ –"– | 6.00 | 12.00 |
| | –"– ಸುಧೀರ್ ಸರ್ಕಲ್ –"– | 6.00 | |
| 6 | –"– ಸರ್.ಎಂ.ವಿ. ಕ್ರೀಡಾಂಗಣದ ಆವರಣದಲ್ಲಿ –"– | 6.00 | 6.00 |
| | **ಒಟ್ಟು** | **66.00** | **66.00** |

ಹಾಗೂ ಶೇಕಡ 18ರ ಕ್ರಿಯಾ ಯೋಜನೆಯನ್ನು ತಯಾರಿಸಿ ಈ ಕೆಳಕಂಡ ಕ್ರಮ ವಹಿಸಲು ತೀರ್ಮಾನಿಸಲಾಯಿತು.

| ಕ್ರಮ ಸಂಖ್ಯೆ | ಕ್ರಿಯಾ ಯೋಜನೆ ವಿವರ | ಮೊಬಲಗು ರೂ.ಲಕ್ಷಗಳಲ್ಲಿ |
|---|---|---|
| **I** | **ಶೈಕ್ಷಣಿಕ ಕಾರ್ಯಕ್ರಮಗಳಿಗೆ** | |
| 1 | ಅಂಗನವಾಡಿ ಕಟ್ಟಡಗಳ ನಿರ್ಮಾಣಕ್ಕಾಗಿ | 25.00 |
| 2 | ಕಂಪ್ಯೂಟರ್ ತರಬೇತಿಗಾಗಿ | 2.00 |
| 3 | ಕಾರು/ಆಟೋ ಚಾಲನೆ ತರಬೇತಿಗಾಗಿ | 2.00 |
| 4 | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಅನುದಾನಿತ ವಿದ್ಯಾರ್ಥಿನಿಲಯಗಳಿಗೆ ಅಡಿಗೆ ಕೊಠಡಿ ನಿರ್ಮಾಣ/ಶಾಲಾ ಕೊಠಡಿ ನಿರ್ಮಾಣ. | 12.00 |
| 5 | ಉನ್ನತ ವಿದ್ಯಾಭ್ಯಾಸಕ್ಕಾಗಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಪಠ್ಯ ಪುಸ್ತಕಗಳಿಗಾಗಿ ಮತ್ತು ತಟ್ಟೆ ಲೋಟಗಳನ್ನು ಸರಬರಾಜು ಮಾಡಲು | 4.00 |
| 6 | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಶಾಲಾ ಕಾಲೇಜುಗಳಿಗೆ ಡೆಸ್ಕ್ ಬೆಂಚು ಮತ್ತು ಹಾಸ್ಟೆಲ್‌ಗಳಿಗೆ ಸ್ಟೀಲ್ ಮಂಚಗಳಿಗಾಗಿ | 6.00 |
| 7 | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಹೆಣ್ಣು ಮಕ್ಕಳಿಗೆ ಹೊಲಿಗೆ ತರಬೇತಿ ನೀಡಿ ಹೊಲಿಗೆ ಯಂತ್ರ ಗಳನ್ನು ನೀಡುವುದು. | 4.00 |
| 8 | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಖಾಸಗಿ ಶಾಲೆಗಳಿಗೆ ಬ್ಯಾಂಡ್ ಸೆಟ್ ನೀಡುವುದಕ್ಕಾಗಿ | 5.00 |
| 9 | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಕಾಲೇಜು ಬಾಲಕ/ಬಾಲಕಿಯರ ವಿದ್ಯಾರ್ಥಿನಿಲಯಗಳಿಗೆ ಕುರ್ಚಿಗಳು (450 ಸಂಖ್ಯೆ) ಮತ್ತು ಅಡಿಗೆ ಪಾತ್ರೆಗಳನ್ನು ನೀಡಲು | 3.85 |
| | **ಒಟ್ಟು** | 63.85 |
| **II** | **ಆರ್ಥಿಕಾಭಿವೃದ್ಧಿ ಕಾರ್ಯಕ್ರಮಗಳಿಗಾಗಿ:** | |
| 1 | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ನಿರುದ್ಯೋಗಿಗಳಿಗೆ ಸಣ್ಣ ವ್ಯಾಪಾರ ಕಲ್ಪಿಸಿ ವೃತ್ತಿ ಜೀವನ ಸಾಗಿಸಲು. | 5.00 |
| 2 | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಅನುದಾನಿತ ಹಾಸ್ಟೆಲ್ ಮತ್ತು ಶಾಲೆಗಳಿಗೆ ಕಂಪ್ಯೂಟರ್ ನೀಡಲು | 5.00 |
| 3 | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಜನರಿಗೆ 4 ಚಕ್ರದ ತಳ್ಳು ಗಾಡಿಗಳನ್ನು ನೀಡಲು | 5.00 |
| 4 | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ನೋಂದಾಯಿತ ಸಂಘ ಸಂಸ್ಥೆಗಳಿಗೆ ಕುರ್ಚಿ, ಟೇಬಲ್, ಅಲ್ಮೆರಾ, ಬಣ್ಣದ ಟಿ.ವಿ.ಗಳನ್ನು ನೀಡಲು | 5.00 |
| 5 | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಮನೆ ಇರುವವರಿಗೆ ಪ್ರತ್ಯೇಕ ಶೌಚಾಲಯ ಇಲ್ಲದಿದ್ದಲ್ಲಿ ಶೌಚಾಲಯಗಳನ್ನು ನಿರ್ಮಿಸಲು. | 13.85 |
| 6 | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಖಾತಾ ಹೊಂದಿರುವವರಿಗೆ ಮನೆಗಳನ್ನು ದುರಸ್ತಿ (ರಿಪೇರಿ) ಮಾಡಿಕೊಳ್ಳುವುದಕ್ಕಾಗಿ | 5.00 |
| 7 | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಖಾತೆ ಹೊಂದಿರುವ ಗುಡಿಸಲು ನಿವಾಸಿಗಳಿಗೆ ಮನೆ ನಿರ್ಮಿಸಿಕೊಳ್ಳಲು. | 10.00 |
| 8 | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ದೇವಾಲಯಗಳಿಗೆ ಅಡಿಗೆ ಪಾತ್ರೆಗಳನ್ನು ನೀಡುವುದಕ್ಕಾಗಿ. | 5.00 |
| 9 | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ವಿದ್ಯುತ್ ಇಲ್ಲದಿರುವ ಮನೆಗಳಿಗೆ ವಿದ್ಯುತ್ ಕಲ್ಪಿಸಲು | 5.00 |
| 10 | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನಾಂಗದವರು ವಾಸವಾಗಿರುವ ಪ್ರದೇಶಗಳಲ್ಲಿ ದೇವಸ್ಥಾನ ಗಳಿಗೆ ಕಾಂಪೌಂಡ್ ನಿರ್ಮಾಣಕ್ಕಾಗಿ. | 5.00 |
| | **ಒಟ್ಟು** | 63.85 |
| **III** | **ಇತರೆ** | |
| 1 | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರು ವಾಸವಾಗಿರುವ ಪ್ರದೇಶಗಳಲ್ಲಿ ನಿರ್ವಹಿಸಿರುವ ಕಾಮಗಾರಿ ಬಿಲ್ ಪಾವತಿಸಲು | 32.00 |
| | **ಒಟ್ಟು** | 32.00 |
| | **ಒಟ್ಟು ಮೊತ್ತ** | 122.00 |

2008–09ನೇ ಸಾಲಿಗೆ ಸರ್ಕಾರದಿಂದ ನಗರಸಭೆಗೆ ಬಿಡುಗಡೆಗೆ ಮಂಜೂರಾಗಿರುವ

| | |
|---|---|
| ಎಸ್.ಎಫ್.ಸಿ.ಮುಕ್ತ ನಿಧಿ ಅನುದಾನದ | ರೂ.8,87,19,000–00 |
| ಇದರಲ್ಲಿ ಶೇ.18%ರ ಲೆಕ್ಕ ಶೀರ್ಷಿಕೆ ಬಾಬ್ತು ಕ್ರಿಯಾ ಯೋಜನೆಗಾಗಿ | ರೂ.1,59,69,420–00 |
| 2007–08ನೇ ಸಾಲಿನ ಶೇಕಡ 18%ರ ಎಸ್.ಎಫ್.ಸಿ.ಕಾಮಗಾರಿಗಳ ಬಿಲ್ ಪಾವತಿಗಾಗಿ | ರೂ. 50,82,393–00 |
| | ರೂ.1,08,87,027–00 |

2008–09ನೇ ಸಾಲಿನಲ್ಲಿ ಶೇಕಡ 18%ರ ಲೆಕ್ಕ ಶೀರ್ಷಿಕೆಯಡಿಯಲ್ಲಿ ಕ್ರಿಯಾ ಯೋಜನೆಗೆ ಲಭ್ಯವಿರುವ ಅನುದಾನ ರೂ.1,08,87,027–00
ಈ ಕೆಳಕಂಡಂತೆ ಇರುತ್ತದೆ.

ಸರ್ಕಾರದ ನಿಯಮಗಳ ಪ್ರಕಾರ ಶೇ.18%ರ ಯೋಜನೆಗೆ ಈ ಕೆಳಕಂಡಂತೆ ಕ್ರಿಯಾ ಯೋಜನೆ ತಯಾರಿಸಲಾಗಿರುತ್ತದೆ.

| | | | |
|---|---|---|---|
| ಶೇಕಡ 40 ರಷ್ಟು – | ಶೈಕ್ಷಣಿಕ ಕಾರ್ಯಕ್ರಮಗಳಿಗೆ | – | ರೂ. 63.85ಲಕ್ಷಗಳು |
| ಶೇಕಡ 40 ರಷ್ಟು – | ಆರ್ಥಿಕಾಭಿವೃದ್ಧಿಗಾಗಿ | – | ರೂ. 63.85ಲಕ್ಷಗಳು |
| ಶೇಕಡ 20 ರಲ್ಲಿ – | ಇತರೆ | – | ರೂ. 32.00ಲಕ್ಷಗಳು |

ಶೈಕ್ಷಣಿಕ ಮತ್ತು ಆರ್ಥಿಕಾಭಿವೃದ್ಧಿಗಾಗಿ ವಿವರವಾದ ಕ್ರಿಯಾ ಯೋಜನೆ ತಯಾರಿಸಿರುವುದಕ್ಕೆ ಸಭೆಯಲ್ಲಿ ಒಪ್ಪಿ ಅನುಮೋದಿಸಲಾಯಿತು.

ಇತರೆ ಕಾರ್ಯಕ್ರಮಗಳ ಬಾಬ್ತು ಈಗಾಗಲೇ 2008–09ನೇ ಸಾಲಿನಲ್ಲಿ ರೂ.50,82,393–00 ಗಳ ಕಾಮಗಾರಿ ಬಿಲ್ ಪಾವತಿಸಬೇಕಾಗಿದ್ದು ಈ ಪೈಕಿ ಇತರೆ ಕಾರ್ಯಕ್ರಮಗಳಿಗೆಕ ಮೀಸಲಿಟ್ಟಿರುವ ರೂ.32.00ಲಕ್ಷಗಳನ್ನು ಬಾಕಿ ಬಿಲ್ ಪಾವತಿಸಲು ಅನುಮೋದನೆ ನೀಡುವಂತೆ ಮಾನ್ಯ ಜಿಲ್ಲಾಧಿಕಾರಿಗಳು ರವರಿಗೆ ಪ್ರಸ್ಥಾವನೆ ಸಲ್ಲಿಸುವಂತೆ ಸಭೆಯಲ್ಲಿ ಒಪ್ಪಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ:5:–** ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಮಂಡ್ಯರವರ ಪತ್ರದ ಸಂಖ್ಯೆ:ಕಜಮಂ/ಕಾಅ/ಮಂಡ್ಯ.ವಿ/ಸಅ/1/ಕಸಂ/56/1247/2008–09 ದಿನಾಂಕ:15–1–2009ದಂತೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:5:–** ಸಾರ್ವಜನಿಕರಿಗೆ ಶುದ್ಧವಾದ ಕುಡಿಯುವ ನೀರು ಸರಬರಾಜು ಮಾಡುವ ಹಿತದೃಷ್ಟಿಯಿಂದ ಮಂಡ್ಯ ನಗರದ ನೀರು ಸರಬರಾಜು ಯೋಜನೆಯಡಿ ರಾಗಿಮುದ್ದನಹಳ್ಳಿ ಹತ್ತಿರ ನಿರ್ಮಿಸಿರುವ 5.00ಲಕ್ಷ ಲೀಟರ್ ಸಾಮರ್ಥ್ಯದ ವಾಶ್ ವಾಟರ್ ಟ್ಯಾಂಕ್ ತುಂಬಾ ಹಳೆಯದಾಗಿದ್ದು ದುರಸ್ತಿಗೊಳಿಸಲು ಕಷ್ಟವಾಗಿರುವುದರಿಂದ ಹಾಗೂ ಸಮರ್ಪಕವಾಗಿ ನೀರು ಸರಬರಾಜು ಮಾಡಲು ವಾಶ್ ವಾಟರ್ ಟ್ಯಾಂಕ್ ಅತ್ಯವಶ್ಯಕವಾಗಿರುವುದರಿಂದ ಹೊಸದಾಗಿ 5.00ಲಕ್ಷ ಲೀಟರ್ ಸಾಮರ್ಥ್ಯದ ವಾಶ್ ವಾಟರ್ ಟ್ಯಾಂಕ್ ನಿರ್ಮಾಣದ ಬಾಬ್ತು ಅಂದಾಜು ವೆಚ್ಚ ರೂ.45.00ಲಕ್ಷಗಳ ಕೆಲಸಕ್ಕಾಗಿ ವಿಶೇಷ ಅನುದಾನ ಬಿಡುಗಡೆ ಮಾಡಿಕೊಡಲು ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು

**ವಿಷಯ:6:–** ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬೆಂಗಳೂರುರವರ ಪತ್ರದ ಸಂಖ್ಯೆ:ಕಜಮಂ/ಮುಅ/ಉಮುಅ/ತಾಂಸ.8/3106/2008–09 ದಿನಾಂಕ:2–1–2009ರ ಪತ್ರದಂತೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:6:–** ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಸಹಾಯಕ ಕಾರ್ಯಪಾಲಕ ಅಭಿಯಂತರ ವಿವರಣೆ ಪಡೆದು, ಮಂಡ್ಯ ನಗರದ ನಾಗರೀಕರಿಗೆ ಸಮರ್ಪಕವಾಗಿ ನೀರು ಸರಬರಾಜು ಮಾಡುವ ಹಿತದೃಷ್ಟಿಯಿಂದ ಮಂಡ್ಯ ನಗರದ ನೀರು ಸರಬರಾಜು ಮಾಡುವ ಮೊದಲನೇ ಮತ್ತು 2ನೇ ಹಂತದ 400ಎಂ.ಎಂ. ಮತ್ತು 600

ಎಂ.ಎಂ.ವ್ಯಾಸದ ಪೈಪ್ ಲೈನ್‌ಗಳಿಗೆ ಲೋಕಪಾವನಿ ಸೇತುವೆಯ ಎರಡು ಬದಿಗಳಲ್ಲಿ 457ಮಿ.ಮೀ.ವ್ಯಾಸದ ಎಂ.ಎಸ್.ಕೊಳವೆಯನ್ನು ಮೊದಲನೇ ಹಂತದ ಕೊಳವೆ ಮಾರ್ಗಕ್ಕೆ ಹಾಗೂ 660ಮಿ.ಮೀ.ವ್ಯಾಸದ ಎಂ.ಎಸ್.ಕೊಳವೆಯನ್ನು 2ನೇ ಹಂತದ ಕೊಳವೆ ಮಾರ್ಗಕ್ಕೆ ಅಳವಡಿಸುವ ಬಾಬ್ತು ಅಂದಾಜು ರೂ47.5ಲಕ್ಷಗಳ ಕಾಮಗಾರಿಯನ್ನು ಈಗಾಗಲೇ ಮಂಡಳಿಯಿಂದ ಕೈಗೆತ್ತಿಕೊಂಡಿರುವ ವಿತರಣಾ ಕೊಳವೆ ಮಾರ್ಗವನ್ನು ಬದಲಿಸುವ ರೂ.625.00ಲಕ್ಷಗಳ ಯೋಜನೆಯ ಉಳಿತಾಯ ಹಣದಲ್ಲಿ ಮಂಡಳಿ ವತಿಯಿಂದ ಕೈಗೆತ್ತಿಕೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**<u>ವಿಷಯ:7:–</u>** ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಮಂಡ್ಯರವರ ಪತ್ರ ಸಂಖ್ಯೆ:ಕನಒ/ಇಇ/ಎಂ.ಎನ್.ಡಿ./ಎ.ಇ.–1/ಎಫ್.ನಂ.56/ಎಂಎನ್‌ಡಿ/ಓಹೆಚ್‌ಟಿ–ವಿದ್ಯಾ/1176/2008–09 ದಿನಾಂಕ:26–12–2008ರ ಪತ್ರದಂತೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**<u>ತೀರ್ಮಾನ:7:–</u>** ನಗರದ ಸಾರ್ವಜನಿಕರಿಗೆ ಕುಡಿಯುವ ನೀರನ್ನು ಸರಬರಾಜು ಮಾಡುವ ಹಿತದೃಷ್ಟಿಯಿಂದ 11ನೇ ವಾರ್ಡ್ ವಿದ್ಯಾನಗರದಲ್ಲಿರುವ 10ಲೀಟರ್ ಸಾಮರ್ಥ್ಯದ ಆರ್.ಸಿ.ಸಿ.ಓವರ್ ಹೆಡ್ ಟ್ಯಾಂಕನ್ನು ದುರಸ್ತಿಗೊಳಿಸುವುದು ಅತ್ಯವಶ್ಯಕವಾದ್ದರಿಂದ ಅಂದಾಜು ವೆಚ್ಚ ರೂ.14,10,000–00ಗಳ ದುರಸ್ತಿ ಕೆಲಸವನ್ನು ಮಾಡಿಸಲು ಸಾರ್ವಜನಿಕ ಹಿತದೃಷ್ಟಿ ಯಿಂದ ನಗರಸಭೆ ನಿಧಿಯಿಂದ ಕೈಗೆತ್ತಿಕೊಳ್ಳಲು ತೀರ್ಮಾನಿಸಲಾಯಿತು.

**<u>ವಿಷಯ:8:–</u>** ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ರವರ ಪತ್ರ ಸಂಖ್ಯೆ:ನನೀ ಮಂಡಳಿ ಪತ್ರ ಸಂಖ್ಯೆ:976/2008–09 ದಿನಾಂಕ:4–11–2008ರ ಪತ್ರದಂತೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**<u>ತೀರ್ಮಾನ:8:–</u>** ಮಂಡ್ಯ ನಗರದ ನಾಗರೀಕರಿಗೆ ಶುದ್ಧವಾದ ಕುಡಿಯುವ ನೀರನ್ನು ಸರಬರಾಜು ಮಾಡುವ ಹಿತದೃಷ್ಟಿಯಿಂದ ರಾಗಿಮುದ್ದನಹಳ್ಳಿಯಲ್ಲಿರುವ ಮಂಡ್ಯ ನಗರದ 1 ಮತ್ತು 2ನೇ ಹಂತದ ವಾಟರ್ ಟ್ರೀಟ್ಮೆಂಟ್ ಪ್ಲಾಂಟ್ ದುರಸ್ತಿ ಕಾಮಗಾರಿ ಬಾಬ್ತು ಅಂದಾಜು ವೆಚ್ಚ ರೂ:23.00ಲಕ್ಷಗಳ ಕೆಲಸಕ್ಕಾಗಿ ವಿಶೇಷ ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**<u>ವಿಷಯ:9:–</u>** ಕಾವೇರಿ ನೀರಾವರಿ ನಿಗಮ (ನಿಯಮಿತ) ಮಂಡ್ಯರವರ ಪತ್ರದ ಸಂಖ್ಯೆ:ವಿನಾವಿ.ಮಂಡ್ಯ/ಲೆಸ–2/ ನೀರು ಕರ/2008–09/4047–53 ದಿನಾಂಕ:20–10–2008ರಂತೆ ರೂ.10,76,206/–ಗಳನ್ನು ಕೋರಿರುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**<u>ತೀರ್ಮಾನ:9:–</u>** ಸಭೆಯಲ್ಲಿ ಚರ್ಚಿಸಲಾಗಿ ನಗರಸಭೆಯಿಂದ ವಿ.ಸಿ.ವಸತಿ ಗೃಹಗಳ ಕಟ್ಟಡಗಳ ಕಂದಾಯ ಬಾಕಿ 1996–07 ರಿಂದ 2001–02ರವರೆಗೆ ಬಾಕಿ ರೂ.3,82,484–00ಗಳು ಬಾಕಿ ಇದ್ದು, 2002–03ನೇ ಸಾಲಿನ 2008–09ರವರೆಗೆ ಸುಮಾರು ರೂ.11.00 ಲಕ್ಷಗಳಷ್ಟು ಕಂದಾಯ ಬಾಕಿ ಇರುತ್ತದೆ. ಒಟ್ಟು ಬಾಕಿ ಕಂದಾಯ ಸುಮಾರು ರೂ.10,82,000–00ಗಳಷ್ಟು ಬಾಕಿ ಇರುತ್ತದೆ. ಸಾಮಾನ್ಯವಾಗಿ ವಸತಿ ಗೃಹಗಳ ಬಾಡಿಗೆಯನ್ನು ವಸತಿ ಗೃಹಗಳಲ್ಲಿ ವಾಸಿಸುವ ನೌಕರರುಗಳ ವೇತನದಲ್ಲಿ ಮನೆ ಬಾಡಿಗೆ ಭತ್ಯೆ ಕಟಾಯಿಸಿಕೊಳ್ಳಲಾಗುತ್ತಿದೆ. ಸದರಿ ಕಟಾಯಿಸಿದ ಮೊಬಲಗಿನಲ್ಲಿ ನಗರಸಭೆಗೆ ಪ್ರತಿ ವರ್ಷ ನಿಯಮಾನುಸಾರ ಕಂದಾಯ ಪಾವತಿಸಬೇಕಾಗುತ್ತದೆ. ಆದಾಗ್ಯೂ ಕಾವೇರಿ ನೀರಾವರಿ ವಸತಿ ಗೃಹಗಳ ಬಾಡಿಗೆ ಬಾಕಿ ರೂ.14.82ಲಕ್ಷಗಳು ಬಾಕಿ ಇದ್ದರೂ ನಗರಸಭೆಯಿಂದ ಮಾನವೀಯತೆ ದೃಷ್ಟಿಯಿಂದ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದೆ. ಕಾವೇರಿ ನೀರಾವರಿ ನಿಗಮದವರು ತಮ್ಮ ಪತ್ರದ ದಿನಾಂಕ:20–10–2008ರಲ್ಲಿ ರೂ.10,76,206/–ಗಳನ್ನು ಶೀಘ್ರವಾಗಿ ಕಾವೇರಿ ನೀರಾವರಿ ನಿಗಮಕ್ಕೆ ನೀರು ಸರಬರಾಜು ಮಾಡಲಾದ ತೆರಿಗೆ ಮೊತ್ತವೆಂದು ತಿಳಿಸಿರುತ್ತಾರೆ.

ಕಾವೇರಿ ನದಿಯಲ್ಲಿ ಪ್ರಕೃತಿದತ್ತವಾಗಿ ನೀರು ಹರಿಯುತ್ತಿರುತ್ತದೆ. ಸದರಿ ನೀರನ್ನು ವ್ಯವಸಾಯಕ್ಕೋಸ್ಕರ ವಿ.ಸಿ.ನಾಲಾ ಬಾವಿಗಳಿಗೆ ಹರಿಸಲಾಗುತ್ತಿದೆ. ಆ ಸಮಯದಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ಕುಡಿಯುವ ನೀರಿನ ಉಪಯೋಗಕ್ಕೋಸ್ಕರ ಸ್ವಲ್ಪ ಭಾಗ ನೀರನ್ನು ಪೈಪ್ ಲೈನ್ ಮುಖಾಂತರ ಪಂಪ್ ಹೌಸ್‌ಗೆ ಹರಿಸಲಾಗುತ್ತಿದೆ. ಅದರಂತೆ ನೀರನ್ನು ಸಾರ್ವಜನಿಕರಿಗೆ ವಿತರಿಸಲಾಗುತ್ತಿದೆ. ನಗರಸಭೆ ಮತ್ತು ಕಾವೇರಿ ನೀರಾವರಿ ನಿಗಮದ ಮಧ್ಯೆ ಕುಡಿಯುವ ನೀರು ಉಪಯೋಗಿಸುವ ಬಗ್ಗೆ ತೆರಿಗೆ ಪಾವತಿಸುವ ಬಗ್ಗೆಯಾಗಲಿ ಕರಾರು ಆಗಿರುವುದಿಲ್ಲ. ಈ ನೀರಿನ ತೆರಿಗೆ ಬಗ್ಗೆ ಸರ್ಕಾರದೊಡನೆ ಪತ್ರ ವ್ಯವಹಾರ ನಡೆಸುವಂತೆ ಕಾವೇರಿ ನೀರಾವರಿ ನಿಗಮಕ್ಕೆ ಪತ್ರ ಬರೆಯುವಂತೆ ಹಾಗೂ ಬಾಕಿ ಇರುವ ವಸತಿ ಗೃಹ ಕಟ್ಟಡಗಳ ಕಂದಾಯವನ್ನು ಪಾವತಿಸು ವಂತೆ ತಿಳಿಸಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**<u>ವಿಷಯ:10:–</u>** ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ನಿರ್ವಹಣಾ ಉಪ ವಿಭಾಗ, ಮಂಡ್ಯರವರ ಪತ್ರದ ಸಂಖ್ಯೆ:ಕಜಮ/ಸಕಾಅ/ಮಂಡ್ಯ ನಿಉವಿ/694/2008–09 ದಿನಾಂಕ: 12–12–2008ರ ಪತ್ರದಂತೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:10:–** ಮಂಡ್ಯ ನಗರದ ಕಾವೇರಿ ನಗರ 2ನೇ ಹಂತ ಹಾಗೂ ವಿನಾಯಕ ನಗರ ಬಡಾವಣೆಗಳು ಮಂಡ್ಯ ನಗರಸಭೆ ವ್ಯಾಪ್ತಿಗೆ ಸೇರ್ಪಡೆಯಾದ ನಂತರ ನೀರು ಸರಬರಾಜು ವ್ಯವಸ್ಥೆಯನ್ನು ಕಲ್ಪಿಸುವ ಬಗ್ಗೆ ಮುಂದೆ ಪರಿಶೀಲಿಸಬಹುದಾಗಿದೆ. ಸಧ್ಯಕ್ಕೆ ಹಾಲಿ ನಗರಸಭೆ ವ್ಯಾಪ್ತಿಯಲ್ಲಿನ ಹಲವು ಪ್ರದೇಶದಲ್ಲಿ ನೀರು ಸರಬರಾಜು ವ್ಯವಸ್ಥೆ ಸಮರ್ಪಕವಾಗಿ ಆಗದೇ ನೀರಿನ ಸಮಸ್ಯೆ ಉಂಟಾಗಿದ್ದು ಸಮರ್ಪಕ ನೀರು ಸರಬರಾಜು ಮಾಡುವಂತೆ ಮಂಡಳಿಗೆ ಸೂಚಿಸುವುದೆಂದು ತೀರ್ಮಾನಿಸಲಾಯಿತು.

ಹಾಗೂ ಶ್ರೀ.ಕೆ.ಎಲ್.ನಾಗೇಂದ್ರರವರು ಮಂಡ್ಯ ನಗರದ ಮರೀಗೌಡ ಬಡಾವಣೆಯಲ್ಲಿ ನಿರ್ಮಿಸಲು ಉದ್ದೇಶಿಸಿರುವ ಓವರ್ ಹೆಡ್ ಟ್ಯಾಂಕ್‌ನ ಜಾಗದ ಬಗ್ಗೆ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿದ್ದು ಪ್ರಕರಣ ಪೂರ್ಣ ಇತ್ಯರ್ಥವಾಗದೇ ಇರುವುದರಿಂದ, ಸದರಿ ಜಾಗದ ಬದಲು ಹೌಸಿಂಗ್ ಕೋ ಆಪರೇಟಿವ್ ಸೊಸೈಟಿ, ಮಂಡ್ಯರವರಿಂದ ಅಗತ್ಯ ಜಾಗವನ್ನು ನಿಯಮಾನುಸಾರ ನಗರಸಭೆಗೆ ಪಡೆದು ಓವರ್ ಹೆಡ್ ಟ್ಯಾಂಕ್ ನಿರ್ಮಿಸಲು ಅವಕಾಶ ಮಾಡಿಕೊಟ್ಟು ಸುಮಾರು 20000 ಜನಸಂಖ್ಯೆಗೆ ಕುಡಿಯುವ ನೀರನ್ನೊದಗಿಸಲು ಅನುಕೂಲ ಕಲ್ಪಿಸುವಂತೆ ಸೂಚಿಸಿದರು. ಎಂ.ಎಲ್.ಮಂಜುನಾಥ್ ರವರು ಅನುಮೋದಿಸಿದರು. ಸಭೆಯು ಸರ್ವಾನುಮತದಿಂದ ಒಪ್ಪಲಾಯಿತು.

**ವಿಷಯ:11:–** ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಮಂಡ್ಯರವರ ಪತ್ರದ ಸಂಖ್ಯೆ:ಕಜಮ/ಕಾ/ಮಂಡ್ಯ ವಿ/ಸ.ಅ–1/ಕಸಂ.273/1095/2008–09 ದಿನಾಂಕ: 4–12–2008ರಂತೆ ತೂಬಿನಕೆರೆ ಕೈಗಾರಿಕಾ ಪ್ರದೇಶದಲ್ಲಿರುವ ಮಲ್ಲಾಡಿ ಬಯೋಟೆಕ್ಸ್ ಕಾರ್ಖಾನೆಗೆ ಮಂಡ್ಯ ನಗರದ ಕಾವೇರಿ ಕುಡಿಯುವ ನೀರು ಸರಬರಾಜು ವ್ಯವಸ್ಥೆಯಿಂದ ನೀರು ಸರಬರಾಜು ಮಾಡಿಕೊಡಬೇಕೆಂದು, ಸದರಿ ಕಾರ್ಖಾನೆಗೆ ಪ್ರತಿ ದಿನ 50000ಲೀಟರ್ ನೀರನ್ನು ವಾಣಿಜ್ಯ ದರ ರೂ.14.12 ಕಿಲೋ ಲೀಟರ್‌ಗಳಲ್ಲಿ ಸರಬರಾಜು ಮಾಡಲು ಕೋರಿರುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:11:–** ಮಂಡ್ಯ ನಗರ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದರಿಂದ ಮಂಡ್ಯ ನಗರಕ್ಕೆ ಸಮರ್ಪಕವಾಗಿ ನೀರು ಸರಬರಾಜು ಮಾಡಲು ಆಧ್ಯತೆ ನೀಡುವುದೆಂದು, ವಾಣಿಜ್ಯೋದ್ಯಮಕ್ಕೆ ನೀರು ಸರಬರಾಜು ಮಾಡಲು ಕೋರಿ ಬಂದಿರುವ ಪ್ರಸ್ತಾವನೆಯನ್ನು ಕೈಬಿಡಲಾಯಿತು.

**ವಿಷಯ:12:–** ಐ.ಡಿ.ಎಸ್.ಎಂ.ಟಿ. ಯೋಜನೆಯಡಿಯಲ್ಲಿ ಮಹಾವೀರ ಸರ್ಕಲ್‌ನಲ್ಲಿ ಹಾಲಿ ಇರುವ ವಾಣಿಜ್ಯ ಸಂಕೀರ್ಣದ ಮೊದಲನೇ ಅಂತಸ್ತಿನಲ್ಲಿ ನಿರ್ಮಾಣಗೊಳ್ಳುತ್ತಿರುವ ಮಳಿಗೆಗಳನ್ನು ವಿಲೇವಾರಿಪಡಿಸಲು ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:–12:–** ಸದಸ್ಯರಾದ ಶ್ರೀ.ಕೆ.ಎಲ್.ನಾಗೇಂದ್ರರವರು ಸಿಲ್ವರ್ ಜ್ಯೂಬಿಲಿ ಪಾರ್ಕ್ ಬಳಿ ಮಹಾವೀರ ವೃತ್ತದ ಹತ್ತಿರ ಐ.ಡಿ.ಎಸ್.ಎಂ.ಟಿ.ಯೋಜನೆಯಡಿ ನಿರ್ಮಿಸಿರುವ ವಾಣಿಜ್ಯ ಸಂಕೀರ್ಣದಲ್ಲಿ ಸೂಕ್ತ ಭದ್ರತಾ ವ್ಯವಸ್ಥೆಗಾಗಿ ಜ್ಯೂಬಿಲಿ ಪಾರ್ಕ ಕಡೆಗೆ ಗ್ರಿಲ್ ಅಳವಡಿಸಿ ಕಟ್ಟಡಕ್ಕೆ ಸೂಕ್ತ ಸುರಕ್ಷತಾ ವ್ಯವಸ್ಥೆಗಳನ್ನು ಮಾಡಿಸುವುದು ಅತ್ಯವಶ್ಯಕವಾಗಿರುತ್ತದೆ ಮೊದಲು ಈ ಕೆಲಸವನ್ನು ಮಾಡಿಸಲು ಸೂಚಿಸಿದರು.

ನಂತರ ಮಂಡ್ಯದ ವಿಜಯಾ ಬ್ಯಾಂಕ್ ಶಾಖೆ ಮತ್ತು ಡಿ.ಸಿ.ಸಿ.ಬ್ಯಾಂಕ್ ಶಾಖೆಯವರು ಬ್ಯಾಂಕ್ ನಡೆಸಲು ಕಟ್ಟಡವನ್ನು ಬಾಡಿಗೆಗೆ ನೀಡುವಂತೆ ಕೋರಿ ಸಲ್ಲಿಸಿರುವ ಮನವಿಯನ್ನು ಪರಿಗಣಿಸಿ ನಿಯಮಾನುಸಾರ ಲೋಕೋಪಯೋಗಿ ಇಲಾಖೆಯವರು ನಿಗಧಿಪಡಿಸುವ ಬಾಡಿಗೆ ದರದಲ್ಲಿ ಕಟ್ಟಡವನ್ನು ಬಾಡಿಗೆಗೆ ನೀಡಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು. ಬ್ಯಾಂಕ್‌ಗಳಿಗೆ ಅವಶ್ಯಕತೆ ಇರುವ ಸೌಲಭ್ಯವನ್ನು ಕಲ್ಪಿಸುವುದು ಹಾಗೂ ಮೊಸಾಯಿಕ್ ಟೈಲ್ಸ್ ಫ್ಲೋರಿಂಗ್ ಬದಲು ವೆಟ್ರಿಫೈಡ್ ಟೈಲ್ಸ್ ಫ್ಲೋರಿಂಗ್ ಅಳವಡಿಸಲು ಸಭೆಯಲ್ಲಿ ಒಪ್ಪಲಾಯಿತು ಹಾಗೂ ಇತರೆ ಮಳಿಗೆಗಳನ್ನು ನಿಯಮಾನುಸಾರ ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡಬಹುದೆಂದು ತೀರ್ಮಾನಿಸಲಾಯಿತು.

**ವಿಷಯ:13:–** ಹತ್ತನೇ ಹಣಕಾಸು ಯೋಜನೆಯಡಿಯಲ್ಲಿ ನಿರ್ಮಾಣಗೊಂಡಿರುವ ಬನ್ನೂರು ರಸ್ತೆಯಲ್ಲಿರುವ ವಾಣಿಜ್ಯ ಮಳಿಗೆಗಳನ್ನು ದುರಸ್ತಿ ಮಾಡುವುದರ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:13:–** ಸಭೆಯಲ್ಲಿ ಚರ್ಚಿಸಲಾಯಿತು. ಬನ್ನೂರು ರಸ್ತೆಯಲ್ಲಿ 10ನೇ ಹಣಕಾಸು ಯೋಜನೆಯಡಿಯಲ್ಲಿ ವಾಣಿಜ್ಯ ಸಂಕೀರ್ಣವನ್ನು ನಿರ್ಮಾಣ ಮಾಡಲಾಗಿರುತ್ತದೆ. ಈಗಾಗಲೇ ಬಾಡಿಗೆ ಹರಾಜು ಮೂಲಕ ವಿಲೇವಾರಿ ಮಾಡಲಾಗಿರುತ್ತದೆ. ಕಟ್ಟಡ ನಿರ್ಮಾಣಗೊಂಡು ಸಉಮಾರು 10 ವರ್ಷಗಳಾಗಿದ್ದು ಸುರಕಿ ಹಾಳಾಗಿದ್ದು ಕೆಲವು ಕಡೆ ಇಟ್ಟಿಗೆ ಕಟ್ಟಡ ಸಹ ಹಾಳಾಗಿರುತ್ತಾರೆ. ಆದ್ದರಿಂದ ಸುರಕಿ ತೆಗೆಯಿಸಿ ಯಲಂಕಾ ಟೈಲ್ಸ್ ಅಳವಡಿಸುವುದೆಂದು ಹಾಗೂ ಸುಣ್ಣಬಣ್ಣ ಮಾಡಿಸಿ ಇತರೆ ದುರಸ್ಥಿಗಳನ್ನು ಮಾಡಬಹುದೆಂದು ತೀರ್ಮಾನಿಸಲಾಯಿತು. ಐ.ಡಿ.ಎಸ್.ಎಂ.ಟಿ ಯೋಜನೆಯಡಿಯಲ್ಲಿ ತರಕಾರಿ ಮಾರುಕಟ್ಟೆ ನಿರ್ಮಿಸಲು ಉದ್ಧೇಶಿಸಿರುವ ಕಾಮಗಾರಿಗೆ ಈ ಹಿಂದೆ 11ನೇ ಹಣಕಾಸು ಯೋಜನೆಯಡಿ ಬಿಡುಗಡೆಯಾಗಿದ್ದ ರೂ.17.50ಲಕ್ಷಗಳ ಅನುದಾನವನ್ನು ಐ.ಡಿ.ಎಸ್.ಎಂ.ಟಿ.ಖಾತೆಗೆ ವರ್ಗಾಯಿಸಲಾಗಿರುತ್ತದೆ. ದಿನಾಂಕ:31–1–2009ರ ವಿಷಯ ಸಂಖ್ಯೆ:14ರಲ್ಲಿ ತರಕಾರಿ ಮಾರುಕಟ್ಟೆ ನಿರ್ಮಾಣ ಕಾಮಗಾರಿಯನ್ನು ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಐ.ಡಿ.ಎಸ್.ಎಂ.ಟಿ.ಸಮಿತಿ ಮಂಡ್ಯ, ಜಿಲ್ಲೆ, ಮಂಡ್ಯರವರು ದಿನಾಂಕ:24–1–2008ರ ಜಿಲ್ಲಾ ಐ.ಡಿ.ಎಸ್.ಎಂ.ಟಿ.ಸಮಿತಿ ಸಭೆಯಲ್ಲಿನ ವಿಷಯ ಸಂಖ್ಯೆ:1ರಲ್ಲಿ ತರಕಾರಿ ಮಾರುಕಟ್ಟೆ ವಾಣಿಜ್ಯ ಮಳಿಗೆಗಳ ನಿರ್ಮಾಣ ಕಾಮಗಾರಿಯನ್ನು ಪ್ರೈವೇಟ್ ಪಬ್ಲಿಕ್ ಪಾರ್ಟನರ್‌ಷಿಪ್ ಪದ್ಧತಿ

–9–

(PPP) ರೀತ್ಯಾ ಕ್ರಮ ವಹಿಸಲು ತೀರ್ಮಾನಿಸಲಾಗಿರುತ್ತದೆ. ಅದರಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ತೀರ್ಮಾನವಾಗಿರುತ್ತದೆ. PPP ಯೋಜನೆಯಡಿಯಲ್ಲಿ ಖಾಸಗಿ ಸಹಭಾಗಿತ್ವದಲ್ಲಿ ತರಕಾರಿ ಮಾರುಕಟ್ಟೆ ನಿರ್ಮಾಣ ಮಾಡಬೇಕಾಗುತ್ತದೆ. ನಗರಸಭೆಯಿಂದ ಯಾವುದೇ ಹಣಕಾಸು ವಿನಿಯೋಗಿಸಲಾಗುವುದಿಲ್ಲ. ಆದ್ದರಿಂದ 11ನೇ ಹಣಕಾಸು ಯೋಜನೆಯಡಿಯಲ್ಲಿ ಐ.ಡಿ.ಎಸ್.ಎಂ.ಟಿ. ಖಾತೆಗೆ ವರ್ಗಾಯಿಸಿರುವ ಮೊಬಲಗನ್ನು ವಾಪಸ್ಸು ಪಡೆದು ಬನ್ನೂರು ರಸ್ತೆ ವಾಣಿಜ್ಯ ಸಂಕೀರ್ಣ ದುರಸ್ಥಿ ಹಾಗೂ ಎಂ.ಸಿ.ರಸ್ತೆಯಲ್ಲಿ ಟ್ಯೂಬಿಲಾರ್ ಪೋಲ್ ಬೀದಿ ದೀಪಗಳ್ನು ಅಳವಡಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. ಹಾಗೂ ಪ್ರಸ್ತಾವನೆಯನ್ನು ಮಾನ್ಯ ಜಿಲ್ಲಾಧಿಕಾರಿಗಳು, ಮಂಡ್ಯರವರಿಗೆ ಅನುಮೋದನೆಗಾಗಿ ಸಲ್ಲಿಸುವುದೆಂದು ಒಪ್ಪಲಾಯಿತು. ಹಾಗೂ ವಾಣಿಜ್ಯ ಸಂಕೀರ್ಣ ದುರಸ್ತಿ ಅಂದಾಜು ಮೊತ್ತ ರೂ.7,50,000–00 ಮತ್ತು ಎಂ.ಸಿ.ರಸ್ತೆ ಟ್ಯೂಬಿಲರ್ ಪೋಲ್ ಬೀದಿ ದೀಪ ಅಳವಡಿಸುವ ಅಂದಾಜು ಮೊತ್ತ ರೂ.9.98ಲಕ್ಷಗಳನ್ನು ಒಪ್ಪಿ ಮಂಜೂರುಮಾಡಲಾಯಿತು.

<u>**ವಿಷಯ**:14:–</u> ದಿನಾಂಕ:25–8–2008ರ ಸಾಮಾನ್ಯ ಅಧಿವೇಶನ ವಿಷಯ ಸಂಖ್ಯೆ:28(6)ರ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

<u>**ತೀರ್ಮಾನ**:14:– </u> ಸಭೆಯಲ್ಲಿ ಚರ್ಚಿಸಲಾಯಿತು. ಐ.ಡಿ.ಎಸ್.ಎಂ.ಟಿ.ಯೋಜನೆಯಡಿ ನಿರ್ಮಿಸಲು ಉದ್ಧೇಶಿಸಿರುವ ತರಕಾರಿ ವಾಣಿಜ್ಯ ಮಳಿಗೆ ಕಾಮಗಾರಿಗೆ ಸರ್ಕಾರದ ಆದೇಶ ಸಂಖ್ಯೆ:ಯು.ಡಿ.ಡಿ.10.ಐ.ಎಸ್.ಟಿ.2007 ಬೆಂಗಳೂರು ದಿನಾಂಕ:3–1–2008 ರಲ್ಲಿ ಯಶಸ್ವಿ ಬಿಡ್ಡುದಾರರಾದ ಶ್ರೀ.ಸಿದ್ದರಾಮು, 1ನೇ ದರ್ಜೆ ಗುತ್ತಿಗೆದಾರರು ಮಂಡ್ಯರವರಿಗೆ ಟೆಂಡರ್ ಮೊತ್ತ ರೂ.511.52ಲಕ್ಷಗಳಿಗೆ ಮಂಜೂರಾತಿ ನೀಡಲಾಗಿತ್ತು. ಆದರೆ ಗುತ್ತಿಗೆದಾರರು (ಟೆಂಡರ್ ಹಾಕಿ ಒಂದು ವರ್ಷ ಕಳೆದರೂ ಕಾಮಗಾರಿ ಕಾರ್ಯಾದೇಶ ನೀಡಿಲ್ಲವಾದ್ದರಿಂದ) ಇ.ಎಂ.ಡಿ.ಮೊತ್ತವನ್ನು ವಾಪಸ್ಸು ಪಡೆದಿರುತ್ತಾರೆ.

ದಿನಾಂಕ:24–1–2008ರಂದು ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ, ಮಂಡ್ಯ ಹಾಗೂ ಅಧ್ಯಕ್ಷರು, ಜಿಲ್ಲಾ ಐ.ಡಿ.ಎಸ್.ಎಂ.ಟಿ.ಸಮಿತಿ, ಮಂಡ್ಯ ಜಿಲ್ಲೆ, ಮಂಡ್ಯರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ವಿಷಯ ಸಂಖ್ಯೆ:1ರ ತೀರ್ಮಾನದಲ್ಲಿ 2006–07ನೇ ಸಾಲಿಗೆ ಮಂಡ್ಯ ನಗರಸಭೆ ವತಿಯಿಂದ ಐ.ಡಿ.ಎಸ್.ಎಂ.ಟಿ.ಯೋಜನೆಯಡಿ ನಿರ್ಮಿಸಲು ಉದ್ಧೇಶಿಸಿರುವ ತರಕಾರಿ ಮಾರುಕಟ್ಟೆ ವಾಣಿಜ್ಯ ಮಳಿಗೆ ಕಾಮಗಾರಿ ರೂ.511.52ಲಕ್ಷಗಳಿಗೆ ಸರ್ಕಾರದಿಂದ ಮಂಜೂರಾಗಿದ್ದು ಗುತ್ತಿಗೆದಾರರು ದಿನಾಂಕ: 19–4–2007 ರಂದು ಪರಿಷ್ಕೃತ ದರ ಜಾರಿಗೆ ಬಂದಿದ್ದರಿಂದ 2006–07ರ ಮಂಜೂರಾದ ದರಕ್ಕಿಂತ ಸುಮಾರು ಶೇಕಡ 25ರಷ್ಟು ಹೆಚ್ಚುವರಿಯಾಗಿದ್ದರಿಂದ ಹಾಗೂ ನಿಗಧಿತ ಸಮಯದಲ್ಲಿ ಕಾಮಗಾರಿ ನಿರ್ಮಾಣದ ಕಾರ್ಯಾದೇಶ ನೀಡಿಲ್ಲವೆಂದು ಗುತ್ತಿಗೆ ದಾರರು ಇ.ಎಂ.ಡಿ.ಹಣ ವಾಪಸ್ಸು ಪಡೆದಿರುತ್ತಾರೆ. ಆದುದರಿಂದ ಸದರಿ ತರಕಾರಿ ಮಾರುಕಟ್ಟೆ ವಾಣಿಜ್ಯ ಮಳಿಗೆಗಳ ನಿರ್ಮಾಣ ಕಾಮಗಾರಿಯನು ಪ್ರೈವೇಟ್ ಪಬ್ಲಿಕ್ ಪಾರ್ಟ್‌ನರ್‌ಷಿಪ್ ಪದ್ಧತಿ ರೀತ್ಯಾ ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ತೀರ್ಮಾನವಾಗಿರುತ್ತದೆ. ಅದರಂತೆ ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವ (Public Private Partnership)ದಲ್ಲಿ ನಗರಸಭೆಗೆ ಬೇಕಾದ ತರಕಾರಿ ಮಾರುಕಟ್ಟೆ ವಿವರ ಹಾಗೂ ಇನ್ನಿತರೆ ಮಾಹಿತಿಗಳನ್ನು ಪ್ರಸ್ತಾವನೆಯಲ್ಲಿರುವಂತೆ ಮಾಧ್ಯಮಗಳ ಮೂಲಕ ಪ್ರಚುರಪಡಿಸಿ ಆಸಕ್ತ ಕಂಪನಿ/ ಗುತ್ತಿಗೆದಾರರು/ಉದ್ದಿಮೆದಾರರು ನಿರ್ಮಿಸಲು ಉದ್ಧೇಶಿಸಿರುವ ಮಾರುಕಟ್ಟೆ ವಿವರ ಮತ್ತು ನಗರಸಭೆಗೆ ಯಾವ ರೀತಿ ಮಾರುಕಟ್ಟೆ ಕಟ್ಟಡ ಅವಶ್ಯಕತೆ ಇರುತ್ತದೆ ಎಂಬುದನ್ನು ಸದರಿಯವರ ಸಮ್ಮುಖದಲ್ಲಿ ಚರ್ಚಿಸಿ ನಗರಸಭೆಯ ಪೌರಾಯುಕ್ತರು ಮತ್ತು ನಗರಸಭಾ ಅಧ್ಯಕ್ಷರವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ ಪ್ರಸ್ತಾವನೆಗೆ ಒಪ್ಪಿಗೆ ಪಡೆಯಬೇಕಾಗಿರುತ್ತದೆ.

ಆಸಕ್ತ ಕಂಪನಿ/ಉದ್ದಿಮೆದಾರರು/ಗುತ್ತಿಗೆದಾರರು ಮಾರುಕಟ್ಟೆ ನಿರ್ಮಾಣದ ವಿನ್ಯಾಸ, ಅಂದಾಜು ಇವುಗಳನ್ನು ಕಂಪನಿ ಯವರೇ ತಯಾರಿಸುವುದು ಮತ್ತು ಕಂಪನಿಯ ಸ್ವಂತ ಹಣದಿಂದ ಮಾರುಕಟ್ಟೆ ಕಟ್ಟಡ ನಿರ್ಮಾಣ ಮಾಡುವುದು ಹಾಗೂ ಸದರಿ ಮಾರುಕಟ್ಟೆ ಕಟ್ಟಡಕ್ಕೆ ಅವಶ್ಯಕವಾದ ಇನ್ನಿತರ ಮೂಲಭೂತ ಸೌಲಭ್ಯಗಳನ್ನು ಅಂದರೆ ವಿದ್ಯುತ್ ಸಂಪರ್ಕ, ನೀರು ಸರಬರಾಜು ಮತ್ತು ಶೌಚಾಲಯ ವ್ಯವಸ್ಥೆ ಸಂಪರ್ಕ ರಸ್ತೆ ವ್ಯವಸ್ಥೆ ಇತ್ಯಾದಿಗಳನ್ನು ಒದಗಿಸುವುದು ಹಾಗೂ ಇಂತಿಷ್ಟು ವರ್ಷಗಳು (ಉದಾಹರಣೆಗೆ 20 ರಿಂದ 30 ವರ್ಷಗಳು) ಸದರಿ ಮಾರುಕಟ್ಟೆಯಿಂದ ಬರುವ ಆದಾಯವನ್ನು ಅವರು ವಸೂಲಿ ಮಾಡಬೇಕಾಗುತ್ತದೆ. ಮತ್ತು ವಸೂಲಿ ಮಾಡಲಾದ ಮೊತ್ತದಲ್ಲಿ ಶೇಕಡ ಇಂತಿಷ್ಟು ಮೊಬಲಗನ್ನು ನಗರಸಭೆಗೆ ಪಾವತಿಸುವುದು ( ಉದಾಹರಣೆಗೆ ಶೇಕಡ 25ರಷ್ಟು) ಅಥವಾ ಒಟ್ಟು ಮಳಿಗೆಯಲ್ಲಿ ಶೇಕಡ ಇಂತಿಷ್ಟು ಸಂಖ್ಯೆ ಮಳಿಗೆಗಳನ್ನು ನಗರಸಭೆಗೆ ಮತ್ತು ಶೇಕಡ 75%ರಷ್ಟು ಕಂಪೆನಿಯವರಿಗೆ.

ಕರಾರಿನಂತೆ ಅವರ ಅವಧಿ ಮುಗಿದ ನಂತರ ತರಕಾರಿ ಮಾರುಕಟ್ಟೆಯ ಪೂರ್ಣ ಒಡೆತನವನ್ನು ನಗರಸಭೆಗೆ ಹಸ್ತಾಂತರಿಸ ಲಾಗುವುದು. ಈ ಎಲ್ಲಾ ಪ್ರಕ್ರಿಯೆ/ಒಪ್ಪಂದ/ಕರಾರು ಇತ್ಯಾದಿಗಳನ್ನು ಪೂರ್ವಭಾವಿ ಸಭೆಯಲ್ಲಿ ಚರ್ಚಿಸಲಾದ ನಂತರ ಕ್ರಮ ವಹಿಸಲಾಗುವುದು. ಆಗಿಂದಾಗ್ಗೆ ನಗರಸಭೆ ಬೈಲಾ ನಿಯಮಗಳಿಗೆ ಸರ್ಕಾರದಿಂದ ಬರುವ ಆದೇಶಗಳಂತೆ ಕ್ರಮ ವಹಿಸುವ ಷರತ್ತಿಗೆ ಒಳಪಟ್ಟು ಪಿ.ಪಿ.ಪಿ.ರೀತ್ಯಾ ನಿರ್ಮಾಣ ಕಾಮಗಾರಿ ಮಾಡಿಕೊಡಬಹುದೆಂದು ಸಭೆಯಲ್ಲಿ ಒಪ್ಪಿ ತೀರ್ಮಾನಿಸಲಾಯಿತು. ಸದಸ್ಯರಾದ ಶ್ರೀ.ಕೆ.ಎಲ್.ನಾಗೇಂದ್ರರವರು ಮಾತನಾಡಿ ತರಕಾರಿ ಮಾರುಕಟ್ಟೆಗಾಗಿ ಮೀಸಲಿಟ್ಟಿರುವ ರಿವಾಲ್ವಿಂಗ್ ಫಂಡ್ ಹಣದಲ್ಲಿ ನಗರ ವಯಾಪ್ತಿಯಲ್ಲಿ ಹಲವಾರು ಬಡಾವಣೆಗಳು ನಿರ್ಮಾಣಗೊಂಡಿದ್ದು ಪ್ರಮುಖ ರಸ್ತೆಗಳಿಗೆ ವಿವಿಧ ವಾರ್ಡ್‌ಗಳಲ್ಲಿ

ಬೀದಿ ದೀಪ ಖರೀದಿಸಿ ಅಳವಡಿಸಲಾಗಿದ್ದು ಗುತ್ತಿಗೆದಾರರು ಬಾಕಿ ಬಿಲ್ ಪಾವತಿಸಿಲ್ಲವೆಂದು ಬೀದಿ ದೀಪ ಸರಬರಾಜನ್ನು ಸ್ಥಗಿತಗೊಳಿಸಿದ್ದು ಮಾರುಕಟ್ಟೆ ನಿರ್ಮಾಣಕ್ಕೆ ನಗರಸಭೆಯಿಂದ ಯಾವುದೇ ರೀತಿಯ ಹಣವನ್ನು ತೊಡಗಿಸಬೇಕಿಲ್ಲವಾದ್ದರಿಂದ ಮಳಿಗೆಗಳ ಠೇವಣಿ ಹಾಗೂ ಬಾಡಿಗೆ ಹಣವನ್ನು ಐ.ಡಿ.ಎಸ್.ಎಂ.ಟಿ.ರಿವಾಲ್ವಿಂಗ್ ಫಂಡ್‌ನಲ್ಲಿ ಜಮೆ ಮಾಡಿದ್ದು ಸದರಿ ರಿವಾಲ್ವಿಂಗ್ ಫಂಡ್ ಹಣವನ್ನು ಮಂಡ್ಯ ನಗರ ಜನತೆಗೆ ಮೂಲಭೂತ ಸೌಲಭ್ಯ ಕಲ್ಪಿಸುವ ಜವಾಬ್ದಾರಿ ಮಂಡ್ಯ ನಗರಸಭೆಯದ್ದಾದ್ದರಿಂದ ರಿವಾಲ್ವಿಂಗ್ ಫಂಡ್ ಹಣದಲ್ಲಿ ಬೀದಿ ದೀಪಗಳ ಬಾಕಿ ಬಿಲ್ ಹಾಗೂ ಸರಬರಾಜು ಮಾಡುವ ಬಿಲ್ ಪಾವತಿಸಲು ಮಾನ್ಯ ಜಿಲ್ಲಾಧಿಕಾರಿಗಳಿಗೆ ಅನುಮೋದನೆಗಾಗಿ ಸಲ್ಲಿಸುವುದೆಂದು ಸೂಚಿಸಿದ್ದರ ಮೇರೆಗೆ ಸಭೆಯಲ್ಲಿ ಮೇಲ್ಕಂಡ ಪ್ರಸ್ತಾವನೆಗೆ ಸರ್ವಾನುಮತದಿಂದ ಒಪ್ಪಿ ತುರ್ತಾಗಿ ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸುವುದೆಂದು ತೀರ್ಮಾನಿಸಲಾಯಿತು.

**ವಿಷಯ:15:–**ಮಂಡ್ಯ ತಾಲ್ಲೂಕು ತಹಸೀಲ್ದಾರ್‌ರವರ ಪತ್ರ ಸಂಖ್ಯೆ:ಎಲ್‌ಎನ್‌ಡಿ(1)ಸಿಆರ್/69/2005–06 ದಿನಾಂಕ:20–10–2008 ರಂತೆ ಮಂಡ್ಯ ತಾಲ್ಲೂಕು ಗುತ್ತಲು ಗ್ರಾಮ ಸರ್ವೆ ನಂಬರ್:1 ಮತ್ತು 2ರ ಮಧ್ಯೆ ಇರುವ ಗ್ರಾಮ ಠಾಣಕ್ಕೆ ಸೇರಿದ 0–01¼ ಜಮೀನು ಮಂಡ್ಯ ನಗರಸಭೆ ವ್ಯಾಪ್ತಿಗೆ ಸೇರಿರುವುದರಿಂದ ಸದರಿ ಜನೀನನ್ನು ನಗರಸಭೆ ಆಸ್ತಿ ಎಂದು ನಗರಸಭೆ ಆಸ್ತಿ ಪುಸ್ತಕದಲ್ಲಿ ದಾಖಲು ಮಾಡಿ ಕೊಳ್ಳುವುದರ ಬಗ್ಗೆ ಒಪ್ಪಿಗೆ ನೀಡುವ ವಿಚಾರ.

**ತೀರ್ಮಾನ:15:–** ನಗರಸಭೆ ಆಸ್ತಿ ವಹಿ (ಪ್ರಾಪರ್ಟಿ ರಿಜಿಸ್ಟರ್)ಯಲ್ಲಿ ದಾಖಲು ಮಾಡಿಕೊಳ್ಳಲು ಸಭೆಯು ಸರ್ವಾನುಮತದಿಂದ ಒಪ್ಪಲಾಯಿತು.

**ವಿಷಯ:16:–** ಮೆ:ಪ್ರಿಂಟರ್ಸ್ ಹೌಸ್, ಹಿರೇಕೆರೂರು ರವರು 2007–08ನೇ ಸಾಲಿನಿಂದ ನಗರಸಭೆಗೆ ಬೇಕಾದ ಕೆ.ಎಂ.ಎಫ್. ಮತ್ತು ಇತರೆ ನಮೂನೆಗಳನ್ನು ಸರಬರಾಜು ಮಾಡುತ್ತಿದ್ದು, 2008–09ನೇ ಸಾಲಿಗೂ ಹಳೇ ದರದಲ್ಲಿಯೇ ಸರಬರಾಜು ಮಾಡಲು ಮುಂದುವರೆಸುವುದರ ಬಗ್ಗೆ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:16:–** ಮೆ:ಪ್ರಿಂಟರ್ಸ್ ಹೌಸ್, ಹಿರೇಕೆರೂರುಹರವರಿಂದ ನಗರಸಭೆಗೆ ಬೇಕಾದ ಕೆ.ಎಂ.ಎಫ್. ಮತ್ತು ಇತರೆ ನಮೂನೆಗಳನ್ನು 2008–09ನೇ ಸಾಲಿಗೂ ಹಳೇ ದರದಲ್ಲಿ ಮುಂದುವರೆಸಲು ಸರ್ವಾನುಮತದಿಂದ ಒಪ್ಪಲಾಯಿತು.

**ವಿಷಯ:17 :–** ಶ್ರೀ.ಕುಮಾರ ಬಿನ್ ಜಯಶಂಕರಪ್ಪ, ಅಂಗವಿಕಲರು, 6ನೇ ಕ್ರಾಸ್, ಗಾಂಧಿನಗರ, ಮಂಡ್ಯ ಇವರು ಒಂದು ನಿವೇಶನ ಕೊಡಿಸಿಕೊಡಬೇಕೆಂದು ಕೋರಿರುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:17:–** ಸದರಿಯವರು ಸಲ್ಲಿಸಿರುವ ಮನವಿಯ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ ಆಶ್ರಯ ಸಮಿತಿಗೆ ಶಿಫಾರಸ್ಸು ಮಾಡಲು ಸಭೆಯು ಸರ್ವಾನುಮತದಿಂದ ಒಪ್ಪಲಾಯಿತು.

**ವಿಷಯ:18:–** ಮಂಡ್ಯ ನಗರಸಭೆಯ ವಾಹನ ಸಂಖ್ಯೆ:ಕೆ.ಎ.11/813 ವಾಹನವನ್ನು ದುರಸ್ತಿ ಮಾಡಿಸಿರುವ ಬಾಬ್ತು ಮೊತ್ತ ರೂ.77,750/–ಗಳನ್ನು ಪಾವತಿಸುವ ಬಗ್ಗೆ ಒಪ್ಪಿಗೆ ನೀಡುವ ವಿಚಾರ.

**ತೀರ್ಮಾನ:18:–** ಪಾವತಿಸುವುದೆಂದು ತೀರ್ಮಾನಿಸಲಾಯಿತು.

**ವಿಷಯ:19:–**ಕಛೇರಿಯ ಜೆರಾಕ್ಸ್ ಯಂತ್ರವನ್ನು ದುರಸ್ತಿ ಮಾಡಿಸಲು ಮೆ:ತೇಜಸ್ ಸರ್ವೀಸ್, ಮೈಸೂರುರವರಿಗೆ ರೂ.13,500–00 ಗಳ ದರಕ್ಕೆ ವಾರ್ಷಿಕ ನಿರ್ವಹಣೆಗೆ ನೀಡುವ ಬಗ್ಗೆ ಒಪ್ಪಿಗೆ ನೀಡುವ ವಿಚಾರ.

**ತೀರ್ಮಾನ:19:–** ವಾರ್ಷಿಕ ನಿರ್ವಹಣೆಗೆ ನೀಡಬಹುದೆಂದು ಸರ್ವಾನುಮತದಿಂದ ಒಪ್ಪಲಾಯಿತು.

**ವಿಷಯ:20:–** ನಗರಸಭೆ ಕಛೇರಿಯ ದಿನನಿತ್ಯದ ಕೆಲಸಗಳಿಗೆ ಮತ್ತು ನಿರ್ಮಲ ನಗರ ಯೋಜನೆಯ ಜಿ.ಐ.ಎಸ್. ಹಾಗೂ ನಿಧಿ ಆಧಾರಿತ ಲೆಕ್ಕ ಪದ್ಧತಿ (ಎಫ್. ಬಿ. ಎ. ಎಸ್.) ಕಾರ್ಯಕ್ರಮದ ತ್ವರಿತ ಅನುಷ್ಠಾನಕ್ಕಾಗಿ ಗಣಕೀಕರಣಗೊಳಿಸಲು ಕಂಪ್ಯೂಟರ್ ಆಪರೇಟರ್‌ಗಳ ಸೇವೆಯನ್ನು 31–12–2009ರವರೆಗೆ ಮುಂದೆವರೆಸುವ ಬಗ್ಗೆ ಒಪ್ಪಿಗೆ ನೀಡುವ ವಿಚಾರ.

**ತೀರ್ಮಾನ:20:–** ಮುಂದುವರೆಸಬಹುದೆಂದು ಸಭೆಯು ಸರ್ವಾನುಮತದಿಂದ ಒಪ್ಪಲಾಯಿತು.

**ವಿಷಯ:21:–** ಶ್ರೀ.ಚಂದ್ರಶೇಖರಯ್ಯ, ಲೆಕ್ಕಾಧೀಕ್ಷಕರು, ನಗರಸಭೆ, ಮಂಡ್ಯ ಇವರು ಹೃದಯ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡಿರುವ ಬಾಬ್ತು ವೈದ್ಯಕೀಯ ವೆಚ್ಚ ರೂ.2,85,000/–ಗಳ ಬಿಲ್ಲನ್ನು ಮಂಜೂರಾತಿಗಾಗಿ ಶಿಫಾರಸ್ಸು ಮಾಡುವುದರ ಬಗ್ಗೆ ಒಪ್ಪಿ ಅನುಮೋದನೆ ನೀಡುವ ವಿಚಾರ.

**ತೀರ್ಮಾನ:21:–** ಒಪ್ಪಿ ಸರ್ವಾನುಮತದಿಂದ ಅನುಮೋದಿಸಲಾಯಿತು.

**ವಿಷಯ:22:–** ಹಾಲಿ ಇರುವ ನಗರಸಭಾ ಸ್ಲಾಟರ್ ಹೌಸನ್ನು ಸರ್ಕಾರದ ಮಾರ್ಗದರ್ಶನದಂತೆ ವೈಜ್ಞಾನಿಕವಾಗಿ ನವೀಕರಿಸಲು ಎಸ್.ಎಫ್.ಸಿ.ಹಣದಲ್ಲಿ ರೂ.50.00ಲಕ್ಷಗಳನ್ನು ಕಾಯ್ದಿರಿಸಿಕೊಂಡಿದ್ದು ಇನ್ನುಳಿಕೆ ಮೊತ್ತವನ್ನು ನಗರಸಭಾ ನಿಧಿಯಿಂದ ಭರಿಸುವುದರ ಬಗ್ಗೆ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:22:–** ಸರ್ಕಾರದ ಆದೇಶದಂತೆ ಕ್ರಮ ವಹಿಸುವುದೆಂದು ತೀರ್ಮಾನಿಸಲಾಯಿತು. ಹಾಗೂ ಸರ್ಕಾರದಿಂದ ಕಟ್ಟಡ ನಿರ್ವಹಣೆ ವೆಚ್ಚಕ್ಕೆಂದು ಬಿಡುಗಡೆಯಾಗಿರುವ ಅನುದಾನದಲ್ಲಿ ಖಾಸಗಿ ಬಸ್ ನಿಲ್ದಾಣ (ನಗರಸಭಾ ಬಸ್ ನಿಲ್ದಾಣ) ಕಟ್ಟಡಕ್ಕೆ ಸುಣ್ಣಬಣ್ಣ ಮಾಡಿಸುವುದೆಂದು ತೀರ್ಮಾನಿಸಲಾಯಿತು.

**ವಿಷಯ:23:–**ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರುರವರ ಪತ್ರ ಸಂಖ್ಯೆ: ಪೌನಿ/ಘವನಿ/ನೆಲ ಭರ್ತಿ/ ಸೌಲಭ್ಯ–ಇ.ಓ.ಇ./ಸಿಆರ್/23/2007–08 ದಿನಾಂಕ:29–4–2008ರಂತೆ ನೆಲ ಭರ್ತಿ ಜಾಗದಲ್ಲಿ ತ್ಯಾಜ್ಯದ ಸಂಸ್ಕರಣೆ ಮತ್ತು ನೆಲಭರ್ತಿ ಸೌಲಭ್ಯಗಳನ್ನು ನಿರ್ಮಿಸಿ ನಿರ್ವಹಿಸಲು ಆಸಕ್ತಿಯುಳ್ಳ ಅರ್ಹ ಏಜೆನ್ಸಿ ಗಳಿಂದ ಇ.ಓ.ಐ.ಆಹ್ವಾನಿಸುವ ಬಗ್ಗೆ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:23:–** ಒಪ್ಪಲಾಯಿತು.

**ವಿಷಯ:24:**–ಕಛೇರಿಯ ಸಹಾಯವಾಣಿ ಕೆಲಸ ನಿರ್ವಹಿಸಲು ಟೆಂಡರ್ ಕರೆಯಲಾಗಿದ್ದು ಬಂದಿರುವ ಟೆಂಡರ್ ಗಳ ಪೈಕಿ ಶ್ರೀ.ಕುಶಾಲ್ ಎಂಟರ್‌ಪ್ರೈಸಸ್, ಬೆಂಗಳೂರು ರವರು ಆರ್ಥಿಕ ಬಿಡ್‌ನಲ್ಲಿ ಅನರ್ಹರಾಗಿರುವ ಕಾರಣ, ಅರ್ಹರಾದ ವಿಜ್ಞಾನ ವೇದಿಕೆ, ಮಂಡ್ಯರವರ ಬಿಡ್ಡನ್ನು ಒಪ್ಪುವ ವಿಚಾರ.

**ತೀರ್ಮಾನ:24:–**ಅರ್ಹರಾದ ವಿಜ್ಞಾನ ವೇದಿಕೆ, ಮಂಡ್ಯರವರ ಬಿಡ್ಡ್‌ನ್ನು ಒಪ್ಪಲಾಯಿತು. ಟೆಂಡರ್ ಮಂಜೂರಾತಿಗಾಗಿ ಮಾನ್ಯ ಜಿಲ್ಲಾಧಿಕಾರಿಗಳು, ಮಂಡ್ಯರವರಿಗೆ ಅನುಮೋದನೆಗಾಗಿ ಕಳುಹಿಸುವುದೆಂದು ತೀರ್ಮಾನಿಸಲಾಯಿತು.

**ವಿಷಯ:25:–** ಅಧ್ಯಕ್ಷರ ಅಪ್ಪಣೆ ಮೇರೆಗೆ ಬರಬಹುದಾದ ಇತರೆ ವಿಷಯಗಳು.

**ವಿಷಯ:25(1):–** ವಾರ್ಡ್ ನಂಬರ್:35ರ ಸದಸ್ಯರಾದ ಶ್ರೀ.ಶಂಕರೇಗೌಡರವರಿಂದ ಬಂದಿರುವ ವಿಷಯ.

ಕಾಮಗಾರಿ ಸ್ಥಳ ಬದಲಾವಣೆ (2ನೇ ಹಂತದ ಪ್ಯಾಕೇಜ್ ನಂ.9ರಲ್ಲಿ) ದೇವೇಗೌಡನದೊಡ್ಡಿ ಶ್ರೀ.ರವಿ ಮನೆಯಿಂದ ಶಂಕರ್ ಮನೆ ಮಾರ್ಗವಾಗಿ ಹೆಬ್ಬಾಳ ರಸ್ತೆ ಸೇರುವ ಸಿ.ಸಿ.ಚರಂಡಿ ರೂ.3.00ಲಕ್ಷಗಳಿಗೆ ಮಂಜೂರಾಗಿದ್ದು ಸದರಿ ಕಾಮಗಾರಿಯನ್ನು ಶ್ರೀ.ದೇವಯ್ಯರವರ ಮನೆ ಹಿಂಭಾಗದಿಂದ ಹೆಬ್ಬಾಳಕ್ಕೆ ಹೋಗುವ ರಸ್ತೆಗೆ ಎಂದು ಕಾಮಗಾರಿ ಸ್ಥಳ ಬದಲಾವಣೆ ಮಾಡಿಕೊಡಬೇಕೆಂದು ಕೋರಿರುವ ವಿಚಾರ.

**ತೀರ್ಮಾನ:25(1):–** ಒಪ್ಪಲಾಯಿತು. ಇದೇ ರೀತಿ ಎಸ್.ಎಫ್.ಸಿ.ಯೋಜನೆಯಡಿಯಲ್ಲಿ ಅವಶ್ಯವಿರುವ ಕಡೆ ಕಾಮಗಾರಿ ಬದಲಾವಣೆ ಮಾಡಿ ನಿರ್ವಹಿಸಲು ಸಹ ತೀರ್ಮಾನಿಸಲಾಯಿತು. ಹಾಗೂ ವಿವಿಧ ಹಂತಗಳಲ್ಲಿ ನಗರಸಭೆಗೆ ಸರ್ಕಾರದಿಂದ ಎಸ್.ಎಫ್.ಸಿ.ಅನುದಾನ ಬಿಡುಗಡೆಯಾಗಿ ಕಾಮಗಾರಿಗಳು ಮುಕ್ತಾಯಗೊಂಡಿದ್ದು ನಗರಸಭಾ ಖಾತೆಯಲ್ಲಿ ಎಸ್.ಎಫ್.ಸಿ.ಅನುದಾನ ಮತ್ತು ಎಸ್.ಎಫ್.ಸಿ.ವಿಶೇಷ ಅನುದಾನಗಳಲ್ಲಿ ಉಳಿಕೆಯಾಗಿರುವ ಮೊಬಲಗಿನಲ್ಲಿ ಪ್ಯಾಕೇಜ್ ಕಾಮಗಾರಿಗಳ ( ಮೊದಲನೇ ಹಂತ , ಎರಡನೇ ಹಂತ) ಬಾಕಿ ಬಿಲ್ ಪಾವತಿಸಲು ತೀರ್ಮಾನಿಸಲಾಯಿತು. ಹಾಗೂ ಮಾನ್ಯ ಜಿಲ್ಲಾಧಿಕಾರಿಗಳವರಿಂದ ಅನುಮೋದನೆ ಪಡೆದು ಬಿಲ್ ಮೊತ್ತವನ್ನು ಪಾವತಿಸಲು ತೀರ್ಮಾನಿಸಲಾಯಿತು.

**ವಿಷಯ:25(2):–** ಸಕ್ಕರೆ ನಗರಕ್ಕೆ ಹಾದು ಹೋಗುವ ಹಳೇ ಎಂ.ಸಿ.ರಸ್ತೆಗೆ ವಿದ್ಯುತ್ ಕಂಬ ಹಾಕಿ ವಿದ್ಯುತ್ ಸಂಪರ್ಕ ಕಲ್ಪಿಸಿ 25 ಸಂಖ್ಯೆ ಬೀದಿ ದೀಪಗಳನ್ನು ಹಾಕಿಸಿಕೊಡಬೇಕೆಂದು ಕೋರಿರುವ ವಿಚಾರ.

**ತೀರ್ಮಾನ:25(2):–** ಈ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ ನಗರ ವ್ಯಾಪ್ತಿಯ ಪ್ರಮುಖ ರಸ್ತೆಗಳಿಗೆ ಲೈನ್ ಎಳೆದು ಅವಶ್ಯವಿರುವ 250ವ್ಯಾಟ್ಸ್ ಸೋಡಿಯಂ ವೇಪರ್ ಲ್ಯಾಂಪ್ಸ್, ಮೆಟಲ್ ಅಲಾಯಿಡ್ ಲ್ಯಾಂಪ್ಸ್ ಬೀದಿ ದೀಪಗಳನ್ನು ಖರೀದಿಸಿ ಅಳವಡಿಸುವುದೆಂದು (ಖಾಸಗಿ ಬಸ್ ನಿಲ್ದಾಣ ಸೇರಿದಂತೆ) ಮಾನ್ಯ ಸದಸ್ಯರಾದ ಶ್ರೀ.ಎಂ.ಜೆ.ಚಿಕ್ಕಣ್ಣರವರು ತಮ್ಮ ವಾರ್ಡ್ ವ್ಯಾಪ್ತಿಯ ಸ್ಲಂಗಳಲ್ಲಿ 12 ಸಂಖ್ಯೆ ಮೆಟಲ್ ಅಲಾಯಿಡ್ ಬೀದಿ ದೀಪಗಳನ್ನು ಖರೀದಿಸಿ ಅಳವಡಿಸುವಂತೆ ಕೋರಿರುವುದನ್ನು ಸಹ ಸಭೆಯಲ್ಲಿ ಒಪ್ಪಲಾಯಿತು. ಈಗಾಗಲೇ ನಗರ ವ್ಯಾಪ್ತಿಯಲ್ಲಿ 11 ಸ್ಥಳಗಳಲ್ಲಿ ಹೈಮಾಸ್ಟ್ ದೀಪಗಳನ್ನು ಅಳವಡಿಸಲು ತೀರ್ಮಾನ ಕೈಗೊಂಡಿದ್ದು ಹಲವು ಸದಸ್ಯರು ಹೆಚ್ಚುವರಿಯಾಗಿ ಪ್ರಮುಖ ವೃತ್ತಗಳಲ್ಲಿ ಹೈಮಾಸ್ಟ್ ದೀಪ ಅಳವಡಿಸುವಂತೆ ಚರ್ಚಿಸಿ ಅಂತಿಮವಾಗಿ ಹೊಸಹಳ್ಳಿ ಬಿಸಿಲು ಮಾರಮ್ಮ ದೇವಸ್ಥಾನದ ವೃತ್ತದಲ್ಲಿ ಹೈಮಾಸ್ಟ್ ದೀಪ ಅಳವಡಿಸುವಂತೆ ಮಾನ್ಯ ಸದಸ್ಯರಾದ ಶ್ರೀ.ಕೆ.ಎಲ್.ನಾಗೇಂದ್ರರವರ ಸೂಚನೆಗೆ ಸಭೆಯಲ್ಲಿ ಒಪ್ಪಿ ಹೈಮಾಸ್ಟ್ ದೀಪ ಅಳವಡಿಸಲು (ನಗರಸಭಾ ನಿಧಿಯಿಂದ) ತೀರ್ಮಾನಿಸಲಾಯಿತು. ಹೆಚ್ಚುವರಿ ಬೇಡಿಕೆ ಇರುವ ಹೈಮಾಸ್ಟ್ ದೀಪಗಳನ್ನು 2009–10ನೇ ಸಾಲಿಗೆ ಸರ್ಕಾರದಿಂದ ಬಿಡುಗಡೆ ಯಾಗಲಿರುವ ಎಸ್.ಎಫ್.ಸಿ.ಮುಕ್ತ ನಿಧಿ ಅನುದಾನದಲ್ಲಿ ಅಳವಡಿಸಿಕೊಳ್ಳಲು ತೀರ್ಮಾನಿಸಲಾಯಿತು.

**ವಿಷಯ: 25(3):–** ವಾರ್ಡ್ ನಂಬರ್:35ರಲ್ಲಿ ದೇವೇಗೌಡನ ದೊಡ್ಡಿಯನ್ನು ಹೊರತುಪಡಿಸಿ ಮಂಡ್ಯ ನಗರಸಭೆ ವ್ಯಾಪ್ತಿಯ ಎಲ್ಲಾ ವಾರ್ಡ್‌ಗಳಲ್ಲಿಯೂ ಒಳಚರಂಡಿ ವ್ಯವಸ್ಥೆ ಇದ್ದು ದೇವೇಗೌಡನ ದೊಡ್ಡಿಗೆ ಒಳಚರಂಡಿ ವ್ಯವಸ್ಥೆ ಕಲ್ಪಿಸಿಕೊಡಬೇಕೆಂದು ಕೋರಿರುವ ವಿಚಾರ.

**ತೀರ್ಮಾನ:25(3):–** ದೇವೇಗೌಡನದೊಡ್ಡಿಗೂ ಸಹ ಒಳಚರಂಡಿ ಅಳವಡಿಸಲು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಪ್ರಸ್ತಾವನೆ ಸಲ್ಲಿಸಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ:25(4):–** ಸದಸ್ಯರಾದ ಶ್ರೀ.ಎಸ್.ಕೆ.ಶಿವಪ್ರಕಾಶ್ ಬಾಬುರವರಿಂದ ಬಂದಿರುವ ವಿಷಯ.

ವಾರ್ಡ್ ನಂಬರ್:19 ರಲ್ಲಿ ನೂರಡಿ ರಸ್ತೆ ಕೊನೆಯ ಭಾಗದಲ್ಲಿ , ಹೊಸಹಳ್ಳಿ ಸರ್ಕಲ್‌ನಲ್ಲಿ, ಜೈನ್ ಎಲೆಕ್ಟ್ರಿಕಲ್ಸ್ ಮುಂಭಾಗ ಹಾಗೂ ರಾಯಲ್ ಆಟೋಮೊಬೈಲ್ಸ್ ಮುಂಭಾಗ , ಡಿ.ಹೆಚ್.ಆಟೋಮೊಬೈಲ್ಸ್ ಮುಂಭಾಗ ಗುಂಡಿ ಮುಚ್ಚುವ ಕಾಮಗಳನ್ನು ನಿರ್ವಹಿಸುವ ವಿಚಾರ.

**ತೀರ್ಮಾನ:25(4):–** ಮಾನ್ಯ ಸದಸ್ಯರುಗಳಾದ ಶ್ರೀ.ಎಂ.ಜೆ.ಚಿಕ್ಕಣ್ಣ ಮತ್ತು ಶ್ರೀ.ಎಂ.ಪಿ.ಅರುಣ್ ಕುಮಾರ್ ರವರು ಸದರಿ ಗುಂಡಿ ಮುಚ್ಚುವ ಕೆಲಸಗಳ ಬಗ್ಗೆ ಸ್ಥಳ ಪರಿಶೀಲಿಸಿದ ನಂತರ ಬಿಲ್ ಪಾವತಿಸುವುದೆಂದು ಸೂಚಿಸಿದರು. ಸಭೆಯು ಒಪ್ಪಿ ಅನುಮೋದಿಸಿತು ಹಾಗೂ ಅಂದಾಜು ಮೊತ್ತ ಈ ಕೆಳಕಂಡಂತಿರುತ್ತದೆ.

| | |
|---|---|
| 1) ನೂರಡಿ ರಸ್ತೆಯ ಕೊನೆ ಭಾಗದಲ್ಲಿ | ರೂ. 1,91,100–00 |
| 2) ಹೊಸಹಳ್ಳಿ ಸರ್ಕಲ್ ಮತ್ತು ಡಿ.ಹೆಚ್.ಕೆ. ಆಟೋ ವರ್ಕ್ಸ್ ಎದುರು | ರೂ. 90,100–00 |
| 3) ರಾಯಲ್ ಆಟೋ ವರ್ಕ್ಸ್ ಎದುರು ಮತ್ತು ವಿ.ವಿ.ರಸ್ತೆಯ ಎಂ.ವಿ.ಜಿ ಬೇಕರಿ ರಸ್ತೆ. | ರೂ. 71,400–00 |
| 4) 100 ಅಡಿ ರಸ್ತೆಯ ಜೈನ್ಸ್ ಎಲೆಕ್ಟ್ರಿಕಲ್ ಎದುರು | ರೂ. 70,000–00 |

**ವಿಷಯ:25(5):–** ಅಶೋಕನಗರ ಮನೆ ನಂಬರ್:1473 ಶ್ರೀ.ಎನ್.ಕೆಂಪೇಗೌಡರವರ ಮನೆಗೆ ಅನಧಿಕೃತವಾಗಿ ಕೊಳಾಯಿ ಸಂಪರ್ಕ ಪಡೆದಿದ್ದು ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಮಂಡ್ಯರವರ ಪತ್ರ ಸಂಖ್ಯೆ:ಸಕಜಮಂ/ಸಕಾಅ/ಮಂಡ್ಯ/ಸಿವಿವಿ/ 841/2007–08 ದಿನಾಂಕ:23–1–2008ರಂತೆ ಮನ್ನಾ ಮಾಡಿಕೊಡಬೇಕೆಂದು ಕೋರಿರುವ ವಿಚಾರ.

**ತೀರ್ಮಾನ:25(5):–** ಕರ್ನಾಟಕ ನಗರ ನೀರು ಸರಬರಾಜು ಮಂಡಳಿ ಅಧಿಕಾರಿಗಳು ಮತ್ತು ನಗರಸಭೆ ಅಧಿಕಾರಿಗಳಿಂದ ಬಂದಿರುವ ವರದಿಯನ್ನು ಪರಿಶೀಲಿಸಿ ಕಾನೂನು ರೀತ್ಯಾ ಕ್ರಮ ವಹಿಸಲು ತೀರ್ಮಾನಿಸಲಾಯಿತು.

**ವಿಷಯ:25(6):–** ವಾರ್ಡ್ ನಂಬರ್:34ರ ಸದಸ್ಯರಾದ ಶ್ರೀಮತಿ:ಬಿ.ಎನ್.ಸವಿತರವರು ಮನವಿ ಸಲ್ಲಿ ಚಿಕ್ಕೇಗೌಡನದೊಡ್ಡಿ, ಚನ್ನಯ್ಯ ಬಡಾವಣೆ ಮತ್ತು ಮಾರುತಿ ಬಡಾವಣೆಗಳ ನಡುವೆ ಇರುವ ಎರಡು ಕೊಳಚೆ ನೀರಿನ ಕಟ್ಟೆಗಳಿಂದ (ಗೆಂಡೆ ಕಟ್ಟೆ ಮತ್ತು ಈರಪ್ಪನ ಕಟ್ಟೆ)ಗಳಿಂದ ಸಾಂಕ್ರಾಮಿಕ ರೋಗಗಳು ಉದ್ಭವವಾಗುವ ಸಾಧ್ಯತೆಗಳಿರುವುದರಿಂದ ಸದರಿ ಕಟ್ಟೆಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಮುಚ್ಚಿಸಿಕೊಡಬೇಕೆಂದು ಕೋರಿರುವ ವಿಚಾರ.

**ತೀರ್ಮಾನ:25(6):–** ವಿಷಯ (1)ರಲ್ಲಿ ತೀರ್ಮಾನವಾಗಿರುವಂತೆ ವಾರ್ಡ್‌ವಾರು ಅನುದಾನದಲ್ಲಿ ಕಾಮಗಾರಿ ಕೈಗೊಳ್ಳುವುದೆಂದು ಸದಸ್ಯರಾದ ಶ್ರೀ.ಶಂಕರೇಗೌಡರವರು ಸೂಚಿಸಿದರು. ನಂತರ ನಗರ ವ್ಯಾಪ್ತಿಯಲ್ಲಿ ಸಂಗ್ರಹವಾಗುವ ಡೆಬ್ರಿಸ್ ಅನ್ನು ತ್ಯಾಜ್ಯ ವಸ್ತುಗಳನ್ನು ಸದರಿ ಗುಂಡಿಗಳಿಗೆ ಭರ್ತಿ ಮಾಡಿಸಿ ಅದರ ಮೇಲೆ ಮಣ್ಣು ಭರ್ತಿ ಹಾಕಿಸಿ ಸಮತಟ್ಟು ಮಾಡಿಸುವುದೆಂದು ತೀರ್ಮಾನಿಸಲಾಯಿತು. ಹಾಗೂ ಮಾರುತಿ ನಗರ 7ನೇ ಕ್ರಾಸ್ ರಸ್ತೆಯಲ್ಲಿ ಚರಂಡಿ ಮತ್ತು ಡೆಕ್ ಸ್ಲ್ಯಾಬ್ ನಿರ್ಮಿಸಲು ತೀರ್ಮಾನಿಸಲಾಯಿತು.

**ವಿಷಯ:25(7):–**ವಾರ್ಡ್ ನಂಬರ್:20ರ ಸದಸ್ಯರಾದ ಶ್ರೀಮತಿ:ಕಲ್ಯೆಯರಸಿರವರು ಮನವಿ ಸಲ್ಲಿಸಿ ದಿನಾಂಕ;25–8–2008ರ ಸಾಮಾನ್ಯ ಸಭೆ ವಿಷಯ ಸಂಖ್ಯೆ:22ರಲ್ಲಿ ತೀರ್ಮಾನವಾಗುವಂತೆ ಪ್ರತಿ ಸದಸ್ಯರಿಗೆ 10.00ಲಕ್ಷ ಕಾಮಗಾರಿಗಳ ಅನುದಾನದಲ್ಲಿ ಕಾಮಗಾರಿ ಕೆಲಸ ನಿರ್ವಹಿಸಲು ಅನುಮೋದನೆಯಾಗಿದ್ದು ಹಾಗೂ ಸದರಿ ಕಾಮಗಾರಿ ಕೆಲಸವು ಮಂಜೂರಾಗಿದ್ದು ಸದರಿ ಕಾಮಗಾರಿ ಬದಲಿಗೆ 2.00ಲಕ್ಷ ರೂಪಾಯಿಗಳಿಗೆ ಬೀದಿ ದೀಪಗಳನ್ನು ಅಳವಡಿಸಿಕೊಡಲು ಕೋರಿರುವ ವಿಚಾರ.

**ತೀರ್ಮಾನ:25(7):–** ಕೈ ಬಿಡಲಾಯಿತು.

**ವಿಷಯ:25(8):–** ಮಾನ್ಯ ನಗರಸಭಾ ಸದಸ್ಯರಾದ ಶ್ರೀ.ಕೆ.ಎಲ್.ನಾಗೇಂದ್ರರವರು ಮತ್ತು ಶ್ರೀ.ಹೆಚ್.ಸಿ.ಬೋರೇಗೌಡರವರು ಮತ್ತು ಇತರೆ ಹತ್ತು ಜನ ನಗರಸಭಾ ಸದಸ್ಯರು ಮನವಿ ಸಲ್ಲಿಸಿ ಗುತ್ತಲು ಕಾಲೋನಿ ದೇವೇಗೌಡನದೊಡ್ಡಿ, ಓಲ್ಡ್ ಟೌನ್, ಕಲ್ಲಹಳ್ಳಿ, ಹಾಲಹಳ್ಳಿ, ತಾವರೆಗೆರೆ, ಕ್ಯಾತುಂಗೆರೆ ಹಾಗೂ ಹೊಸಹಳ್ಳಿ ವ್ಯಾಪ್ತಿಯ ಮನೆಗಳು ಗ್ರಾಮ ಠಾಣಾ ವ್ಯಾಪ್ತಿಯಲ್ಲಿದ್ದು ನಗರಸಭೆಯಲ್ಲಿ ಖಾತೆ ವರ್ಗಾವಣೆ ಮಾಡುವ ವೇಳೆಯಲ್ಲಿ ಮನೆ ಅಳತೆ ಮಾತ್ರ ನಮೂದಾಗಿದ್ದು ಒಟ್ಟು ನಿವೇಶನದ ಅಳತೆಯನ್ನು ನಮೂದಿಸಿರುವುದಿಲ್ಲ. ಆದ್ದರಿಂದ ಒಟ್ಟು ನಿವೇಶನದ ಅಳತೆಗಳನ್ನು ಅಸೆಸ್ಮೆಂಟ್ ವಹಿಯಲ್ಲಿ ದಾಖಲಿಸುವ ಬಗ್ಗೆ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:25(8):–** ಸಾರ್ವಜನಿಕ ಪ್ರಕಟಣೆ ಹೊರಡಿಸಿ ರಾಜಸ್ವ ನಿರೀಕ್ಷಕರು ಮತ್ತು ಕಂದಾಯ ಅಧಿಕಾರಿಗಳ ನಾಯಕತ್ವದಲ್ಲಿ ತಂಡ ರಚಿಸಿ ಈ ನಗರಸಭೆಯ ದಾಖಲಾತಿಗಳಲ್ಲಿ ದಾಖಲಾಗಿರುವ ಗ್ರಾಮ ಠಾಣ ಪ್ರದೇಶಗಳ ಆಸ್ತಿಗಳ ಸ್ಥಳ ಪರಿಶೀಲಿಸಿ ಅಗತ್ಯ ಮಾಹಿತಿಗಳನ್ನು ಪಡೆದು ಸದರಿ ಆಸ್ತಿಗಳ ಪೂರ್ಣ ಅಳತೆಗಳನ್ನು ದಾಕಲ್ಮಾಡುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ:25(9):–** ಮೆ:ಸಪ್ತಗಿರಿ ಎಂಟರ್‌ಪ್ರೈಸಸ್, ಬೆಂಗಳೂರುರವರು ಮನವಿ ಸಲ್ಲಿಸಿ 2006–07ನೇ ಸಾಲಿನ 250 ವ್ಯಾಟ್ಸ್ ಮೆಟಲ್ ಅಲಾಯಿಡ್ ಬೀದಿ ದೀಪಗಳನ್ನು ಅಳವಡಿಕೆ ಮತ್ತು ನಿರ್ವಹಣಾ ಅವಧಿಯು ಮುಗಿದಿರುವುದರಿಂದ ನಂತರದ ದಿವಸಗಳಲ್ಲಿ ನಿರ್ವಹಣೆ ಮಾಡಿರುವ ವೆಚ್ಚವನ್ನು ಪಾವತಿಸಲು ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ**:25(9):–ನಿರ್ವಹಣಾ ಅವಧಿ ಮುಗಿದ ನಂತರ ನಿರ್ವಹಿಸಿರುವ ಬೀದಿ ದೀಪಗಳ ನಿರ್ವಹಣಾ ವೆಚ್ಚ ರೂ.14,92,000–00ಗಳನ್ನು ಪಾವತಿಸುವುದೆಂದು ಸರ್ವಾನುಮತದಿಂದ ಒಪ್ಪಲಾಯಿತು. ಹಾಗೂ ನಿರ್ವಹಣಾ ಅವಧಿಯು ಮುಗಿದಿರುವುದರಿಂದ ಭದ್ರತಾ ಠೇವಣಿ ಮೊತ್ತ ಹಾಗೂ ಇ.ಎಂ.ಡಿ.ಹಣವನ್ನು ಪಾವತಿಸಲು ಸಭೆಯು ತೀರ್ಮಾನಿಸಲಾಯಿತು. ಮತ್ತು ಮಂಡ್ಯ ನಗರಸಭೆ ವ್ಯಾಪ್ತಿಯಲ್ಲಿನ ಬೀದಿ ದೀಪಗಳನ್ನು ಹೊತ್ತಿಸಲು ಮತ್ತು ಆರಿಸಲು ಟೈಮರ್ ಬಾಕ್ಸ್ ಅಳವಡಿಸಲು ನಿಯಮಾನುಸಾರ ಕ್ರಮ ಕೈಗೊಳ್ಳುವುದೆಂದು ತೀರ್ಮಾನಿಸಲಾಯಿತು.

**ವಿಷಯ**:25(10):– ಮೆ:ಶಿವಶಕ್ತಿ ಎಲೆಕ್ಟ್ರಿಕಲ್ಸ್, ವಿ.ವಿ.ರಸ್ತೆ, ಮಂಡ್ಯರವರು ಮನವಿ ಸಲ್ಲಿಸಿ ಈ ಹಿಂದೆ ಮಂಡ್ಯ ನಗರದ ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿರುವ ಸೋಡಿಯಂ ವೇಪರ್ ವಿದ್ಯುತ್ ದೀಪದ ಕಂಬಗಳನ್ನು ಹಾಕಿಸಿರುವ ಬಾಬ್ತು ಬಿಲ್ ಪಾವತಿಸುವ ವಿಚಾರ. (ಕಛೇರಿ ಕಾರ್ಯಾದೇಶ ಸಂಖ್ಯೆ:ನಸಮಂ/ದಾರಿ ದೀಪ/37/98–99 ದಿನಾಂಕ:10–1–2000, 12–2–2000, 17–1–2000, 30–1–2000 ಮತ್ತು ದಿನಾಂಕ;22–1–2000ಗಳ ರೀತ್ಯಾ).

**ತೀರ್ಮಾನ**:25(10):– ಬಾಕಿ ಬಿಲ್ ಮೊತ್ತ ರೂ.1,50,400–00ಗಳನ್ನು ಪಾವತಿಸುವುದೆಂದು ತೀರ್ಮಾನಿಸಲಾಯಿತು.

**ವಿಷಯ**:25(11):– ನಗರಸಭೆ ನೌಕರರಾದ ಶ್ರೀಮತಿ:ಚನ್ನಾಜಮ್ಮ, 'ಡಿ' ಗ್ರೂಪ್ ನೌಕರರು ಮನವಿ ಸಲ್ಲಿಸಿ ಇವರ ಮಗಳಾದ ಕುಮಾರಿ॥ ಶಾಲಿನಿ ರವರಿಗೆ ಶಸ್ತ್ರ ಚಿಕಿತ್ಸೆ ಮಾಡಿಸಿದ ಬಾಬ್ತು ವೈದ್ಯಕೀಯ ವೆಚ್ಚ ರೂ.51,475/–ಗಳನ್ನು ಪಾವತಿಸಲು ಅನುಮೋದನೆ ನೀಡಿ ಶಿಫಾರಸ್ಸು ಮಾಡುವ ವಿಚಾರ.

**ತೀರ್ಮಾನ**:25(11):–ನಿಯಮಾನುಸಾರ ಪರಿಶೀಲಿಸಿ ಮೇಲಧಿಕಾರಿಗಳಿಗೆ ಶಿಫಾರಸ್ಸು ಮಾಡುವುದೆಂದು ತೀರ್ಮಾನಿಸಲಾಯಿತು.

**ವಿಷಯ**:25(12):– ಶ್ರೀ.ನಾಗರಾಜು ಬಿನ್.ಓಬಳೇಶ, ಪೌರಕಾರ್ಮಿಕರು, ನಗರಸಭೆ, ಮಂಡ್ಯ ರವರ ಅನಾರೋಗ್ಯದ ಕಾರಣ ವೈದ್ಯಕೀಯ ವೆಚ್ಚದ ಬಾಬ್ತು ಮೊಬಲಗು ರೂ.16,880/–ಗಳನ್ನು ಪಾವತಿಸಲು ಅನುಮೋದನೆ ನೀಡಿ ಶಿಫಾರಸ್ಸು ಮಾಡುವ ವಿಚಾರ.

**ತೀರ್ಮಾನ**:25(12):– ನಿಯಮಾನುಸಾರ ಪರಿಶೀಲಿಸಿ ಮೇಲಧಿಕಾರಿಗಳಿಗೆ ಶಿಫಾರಸ್ಸು ಮಾಡುವುದೆಂದು ತೀರ್ಮಾನಿಸಲಾಯಿತು.

**ವಿಷಯ**:25(13):– ಶ್ರೀ.ಎನ್.ಪಿ.ಮಂಜು, ದ್ವಿತೀಯ ದರ್ಜೆ ಸಹಾಯಕರು, ನಗರಸಭೆ, ಮಂಡ್ಯ ಇವರ ಪತ್ನಿ ಶ್ರೀಮತಿ:ಎಂ.ಅಶ್ವಿತ ರವರಿಗೆ ಹೆರಿಗೆ ಸಂದರ್ಭದಲ್ಲಿ ಶಸ್ತ್ರ ಚಿಕಿತ್ಸೆ ಮಾಡಿಸಿರುವುದರ ಬಾಬ್ತು ವೈದ್ಯಕೀಯ ವೆಚ್ಚದ ಬಾಬ್ತು ರೂ.11,020–00ಗಳನ್ನು ಪಾವತಿಸಲು ಅನುಮೋದನೆ ನೀಡಿಕ ಶಿಫಾರಸ್ಸು ಮಾಡುವ ವಿಚಾರ.

**ತೀರ್ಮಾನ**:25(13):– ನಿಯಮಾನುಸಾರ ಪರಿಶೀಲಿಸಿ ಮೇಲಧಿಕಾರಿಗಳಿಗೆ ಶಿಫಾರಸ್ಸು ಮಾಡುವುದೆಂದು ತೀರ್ಮಾನಿಸಲಾಯಿತು.

**ವಿಷಯ**:25(14):– ಶ್ರೀಮತಿ: ಆಯಿಷಾ ತಬಸೂಂ, ನಗರಸಭಾ ಸದಸ್ಯರು ಮನವಿ ಸಲ್ಲಿಸಿ ಗುತ್ತಲು ಕಾಲೋನಿಯ ಸಫ್ದರಿಯಾ ಸುನ್ನಿ ಮಸೀದಿ ಖಾತಾ ನಂಬರ್:ಡಿ7/102/78/ಜಿ.60ರ ಖಾತೆಯನ್ನು ತಿದ್ದುಪಡಿ ಮಾಡಿಕೊಡಬೇಕೆಂದು ಕೋರಿರುವ ವಿಚಾರ.

**ತೀರ್ಮಾನ**:25(14):– ಕಾನೂನು ಸಲಹೆ ಪಡೆದು, ನಿಯಮಾನುಸಾರ ಪೂರ್ಣ ಪ್ರಮಾಣದ ಕಡತದೊಂದಿಗೆ ಮುಂದಿನ ಸಭೆಗೆ ಮಂಡಿಸಲು ತೀರ್ಮಾನಿಸಲಾಯಿತು.

**ವಿಷಯ**:25(15):– ಚಿಕ್ಕಮಂಡ್ಯ ಕೆರೆ ಅಂಗಳದಲ್ಲಿ ದಿನಾಂಕ:12–2–2009 ಮತ್ತು 13–2–2009ರಂದು ಮುಸಲ್ಮಾನ ಬಾಂಧವರು ಏರ್ಪಡಿಸಿರುವ ಕಾರ್ಯಕ್ರಮಕ್ಕೆ ಸಾವಿರಾರು ಜನರು ಆಗಮಿಸುತ್ತಿರುವುದರಿಂದ ಸಾರ್ವಜನಿಕರು ರಾತ್ರಿ ವೇಳೆಯಲ್ಲಿ ತಿರುಗಾಡಲು ಅನುಕೂಲವಾಗುವಂತೆ ಬೀದಿ ದೀಪಗಳನು ಹಾಕಿಸಿಕೊಡಲು ಕೋರಿ ಮಾನ್ಯ ಶಾಸಕರು ಬರೆದಿರುವ ಪತ್ರದ ವಿಚಾರ.

**ತೀರ್ಮಾನ**:25(15):– ಸದರಿ ಚಿಕ್ಕಮಂಡ್ಯ ಕೆರೆ ಅಂಗಳದ ಪ್ರದೇಶವು ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಗೆ ಬರುವುದ ರಿಂದ ಈ ಸಂಬಂಧ ಅಗತ್ಯ ಕ್ರಮ ಕೈಗೊಳ್ಳಲು ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಕಳುಹಿಸುವುದೆಂದು ತೀರ್ಮಾನಿಸಲಾಯಿತು.

**ವಿಷಯ**:25(16):– ಮಾನ್ಯ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳುರುರವರ ಸುತ್ತೋಲೆ ಪತ್ರ ಸಂಖ್ಯೆ:ಪೌನಿ/ಎಸ್ಎಎಸ್/56/2005–06 ದಿನಾಂಕ: 2–9–2005ರಲ್ಲಿ ಸೂಚಿಸಿರುವಂತೆ 2005–06ನೇ ಸಾಲಿನಂತೆ ಪ್ರತಿ 3 ವರ್ಷಗಳಿಗೊಮ್ಮೆ ದರವನ್ನು ಶೇಕಡ 15 ರಿಂದ ಶೇಕಡ 30ರವರೆಗೆ ಹೆಚ್ಚಿಸುವುದೆಂದು ತೆರಿಗೆ ದರವನ್ನು ವಿವಿಧ ಪ್ರದೇಶ ವಿವಿಧ ಕಟ್ಟಡ ಹಾಗೂ ವಿವಿಧ ಜಾಗಗಳಿಗೆ ಅನುಗುಣವಾಗಿ ನಿಗಧಿಪಡಿಸಬೇಕೆಂದು ಸೂಚಿಸಿರುತ್ತಾರೆ. ಸದರಿ ಸುತ್ತೋಲೆಯಂತೆ ಮಂಡ್ಯ ನಗರಸಭೆ ವ್ಯಾಪ್ತಿಯಲ್ಲಿ ಬರುವ ತೆರಿಗೆಗೆ ಒಳಪಡುವ ವಿವಿಧ ಜಾಗಗಳಿಗೆ ಆಸ್ತಿ ತೆರಿಗೆಯನ್ನು ಪರಿಷ್ಕೃತಗೊಳಿಸುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ**:25(16):– ವಿಷಯದ ಬಗ್ಗೆ ಚರ್ಚಿಸಲಾಗಿ, ನಗರಸಭಾ ವ್ಯಾಪ್ತಿಯಲ್ಲಿ ಬರುವ ವಾಸದ ಪ್ರದೇಶದ ಜಾಗದಲ್ಲಿ ನಿರ್ಮಿಸಿರುವ ಕಟ್ಟಡಗಳಿಗೆ ಹಳೇ ದರ ಶೇಕಡ 0.4 ಇದ್ದುದನ್ನು ಶೇಕಡ 20ರಷ್ಟು ಹೆಚ್ಚಿಸಿ ಶೇಕಡ 0.48 ರಂತೆ ಹಾಗೂ ವಾಣಿಜ್ಯ ಮತ್ತು ವಸತಿಯೇತರ ಪ್ರದೇಶದ ಜಾಗಗಳಲ್ಲಿ ನಿರ್ಮಿಸಿರುವ ಕಟ್ಟಡಗಳಿಗೆ ಹಳೇ ದರ ಶೇಕಡ 0.6 ಇದ್ದುದ್ದನ್ನು ಶೇಕಡ 25ರಷ್ಟು ಹೆಚ್ಚಿಸಿ ಶೇಕಡ 0.75ರಂತೆ ಹಾಗೂ ಖಾಲಿ ನಿವೇಶನಗಳಿಗೆ ಇದ್ದ ಹಳೇ ದರ ಶೇಕಡ 0.1ರಷ್ಟು ಇದ್ದುದ್ದನ್ನು ಪರಿಷ್ಕೃತ ಮಾರುಕಟ್ಟೆ ಬೆಲೆಗೆ ಅನ್ವಯವಾಗುವಂತೆ ಶೇಕಡ 1 ರಿಂದ ಶೇಕಡ 0.12ರಷ್ಟು ನಿಗಧಿ ಪಡಿಸಿ ಆಸ್ತಿ ತೆರಿಗೆಯನ್ನು ಪುನರ್ ಪರಿಷ್ಕೃತ ತೆರಿಗೆ 2008–09ನೇ ಸಾಲಿನಿಂದ ಜಾರಿಗೊಳಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

| ಕ್ರಮ ಸಂಖ್ಯೆ | ತೆರಿಗೆ ವಿವರ | ಹಳೇ ದರ | ಹೊಸ ದರ |
|---|---|---|---|
| 1 | ವಾಸದ ಪ್ರದೇಶದ ಜಾಗದಲ್ಲಿ ನಿರ್ಮಿಸಿರುವ ಕಟ್ಟಡಗಳಿಗೆ | ಶೇಕಡ 0.4 | ಶೇಕಡ 0.48 |
| 2 | ವಾಣಿಜ್ಯ ಮತ್ತು ವಸತಿಯೇತರ ಪ್ರದೇಶದ ಜಾಗಗಳಲ್ಲಿ ನಿರ್ಮಿಸಿರುವ ಕಟ್ಟಡಗಳಿಗೆ | ಶೇಕಡ 0.6 | ಶೇಕಡ 0.75 |
| 3 | ಖಾಲಿ ನಿವೇಶನಗಳಿಗೆ | ಶೇಕಡ 0.1 | ಪರಿಷ್ಕೃತ ಮಾರುಕಟ್ಟೆ ಬೆಲೆಗೆ ಅನ್ವಯವಾಗುವಂತೆ ಶೇಕಡ 1 ರಿಂದ ಶೇಕಡ 0.12 |

ವಿಷಯ:25(17):–ಮಾನ್ಯ ಸದಸ್ಯರುಗಳಾದ ಶ್ರೀ.ಕೆ.ಎಲ್.ನಾಗೇಂದ್ರರವರು ಮತ್ತು ಶ್ರೀ.ಹೆಚ್.ಸಿ.ಬೋರೇಗೌಡರವರು ಮನವಿ ಸಲ್ಲಿಸಿ ಈ ಹಿಂದೆ ಗುತ್ತಿಗೆದಾರರಾದ ಶ್ರೀ.ಕೆ.ಬಿ.ಸತೀಶ್‌ರವರು ಮರೀಗೌಡ ಬಡಾವಣೆ, ವಿ.ವಿ.ನಗರ, ಮತ್ತು ಹೊಸಹಳ್ಳಿ ಹಾಗೂ ಇನ್ನಿತರೆ ಸ್ಥಳಗಳಲ್ಲಿ ಕಾಮಗಾರಿ ನಿರ್ವಹಿಸಿರುವ ಬಾಬ್ತು ಬಾಕಿ ಬಿಲ್ ಮೊತ್ತ ಹಾಗೂ , ಲೇಬರ್ ಕಾಲೋನಿಯಲ್ಲಿರುವ ಸಮುದಾಯ ಭವನಕ್ಕೆ ರೋಲಿಂಗ್ ಶಟ್ಟರ್ ಅಳವಡಿಸಿರುವ ಬಾಬ್ತು ಬಿಲ್ ಮೊಬಲಗನ್ನು ಪಾವತಿಸುವ ಬಗ್ಗೆ ಒಪ್ಪಿಗೆ ನೀಡುವ ವಿಚಾರ.

ತೀರ್ಮಾನ:25(17):– ಬಾಕಿ ಬಿಲ್ ಮೊಬಲಗು ಈ ಕೆಳಕಂಡಂತೆ ಗುತ್ತಿಗೆದಾರರುಗಳಿಗೆ ಪಾವತಿಸುವುದೆಂದು ಸರ್ವಾನು ಮತ ದಿಂದ ತೀರ್ಮಾನಿಸಲಾಯಿತು. ಅಂದಾಜು ಮೊತ್ತ ಈ ಕೆಳಕಂಡಂತಿರುತ್ತದೆ.

1) ಕೆ.ಬಿ.ಸತೀಶ್, ಗುತ್ತಿಗೆದಾರರಿಗೆ – ರೂ. 1,15,000–00
2) ಸಿ.ಅಂದಾನಿ, ಗುತ್ತಿಗೆದಾರರಿಗೆ – ರೂ. 60,000–00
3) ರಮೇಶ್, ಗುತ್ತಿಗೆದಾರರು ರೋಲಿಂಗ್ ಶಟ್ಟರ್ ಅಳವಡಿಸಿದ ಬಾಬ್ತು – ರೂ. 30,000–00

ವಿಷಯ:25(18):– ಶ್ರೀಮತಿ:ಪೊನ್ನಮ್ಮ ಕೋಂ.ಲೇಟ್.ರಾಮಯ್ಯ, ಪೌರಕಾರ್ಮಿಕರು, ನಗರಸಭೆ, ಮಂಡ್ಯರವರು ಮನವಿ ಸಲ್ಲಿಸಿ ಪೌರಕಾರ್ಮಿಕರ ಕಾಲೋನಿಯಲ್ಲಿರುವ ಅಂಗನವಾಡಿ ಕಟ್ಟಡ ಖಾಲಿ ಇದ್ದು ಸದರಿ ಅಂಗನವಾಡಿ ಕಟ್ಟಡವನ್ನು ವಾಸಕ್ಕೆ ಕೊಡಿಸಿ ಕೊಡಬೇಕೆಂದು ಕೋರಿರುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

ತೀರ್ಮಾನ:25(18):– ನಿಯಮಾನುಸಾರ ಪರಿಶೀಲಿಸಿ ಕ್ರಮ ವಹಿಸುವಂತೆ ತೀರ್ಮಾನಿಸಲಾಯಿತು.

ವಿಷಯ:25(19):– ಸದಸ್ಯರಾದ ಶ್ರೀ.ಟಿ.ಎಲ್.ಶಂಕರೇಗೌಡರವರು ವಾರ್ಡ್ ನಂಬರ್:27ರಲ್ಲಿ ತಾವರೆಗೆರೆ 4ನೇ ಕ್ರಾಸ್ ಬೋಜಪ್ಪನ ಮನೆ ಮುಂಭಾಗ ಡೆಕ್ ಸ್ಲ್ಯಾಬ್ ಕಾಮಗಾರಿ ನಿರ್ಮಾಣ ಹಾಗೂ ಚರಂಡಿ ದುರಸ್ತಿಯನ್ನು ಮಾಡುಸುವ ಬಗ್ಗೆ ಅಂದಾಜು ವೆಚ್ಚ ರೂ:98,000–00ಗಳಿಗೆ ಒಪ್ಪಿ ಅನುಮೋದನೆ ನೀಡುವ ವಿಚಾರ.

ತೀರ್ಮಾನ:25(19):– ಸದರಿ ಕಾಮಗಾರಿಯನ್ನು ಮಾಡಿಸುವುದೆಂದು ಒಪ್ಪಲಾಯಿತು.

ವಿಷಯ:25(20):– ಸದಸ್ಯರಾದ ಶ್ರೀಮತಿ:ಪದ್ಮಾವತಿರವರು ವಾರ್ಡ್ ನಂಬರ್:33ರಲ್ಲಿ ಚರಂಡಿಯ ಕಲ್ಲು ಏರುಪೇರಾಗಿದ್ದು ಸಲೀಸಾಗಿ ನೀರು ಮುಂದೆ ಹೋಗದೇ ಅಕ್ಕಪಕ್ಕದ ಮನೆಯವರಿಗೆ ತೊಂದರೆಯಾಗುತ್ತಾ ಇರುವುದರಿಂದ ಸದರಿ ಚರಂಡಿಯನ್ನು ದುರಸ್ತಿ ಮಾಡಿಸಿಕೊಡಬೇಕೆಂದು ಕೋರಿರುವ ವಿಚಾರ.

ತೀರ್ಮಾನ:25(20):– 5000–00ರೂಪಾಯಿಗಳ ವೆಚ್ಚದಲ್ಲಿ ಕೆಲಸ ಅಗುವುದಾದರೆ ಮಾಡಿಸುವುದು 5000–00 ರೂಪಾಯಿಗಳಿಗೂ ಮೇಲ್ಪಟ್ಟು ವೆಚ್ಚವಾಗುವುದಾದರೆ ವಿಷಯ ಸಂಖ್ಯೆ 1 ರಲ್ಲಿ ತೀರ್ಮಾನವಾಗಿರುವಂತೆ ವಾರ್ಡ್‌ವಾರು ತಲಾ 10.00ಲಕ್ಷ ರೂ.ಗಳ ಅನುದಾನದಲ್ಲಿ ಕಾಮಗಾರಿ ಕೈಗೊಳ್ಳುವುದೆಂದು ಸದಸ್ಯರಾದ ಶ್ರೀ.ಶಂಕರೇಗೌಡರವರು ಸೂಚಿಸಿದರು. ಸದರಿಯವರ ಸೂಚನೆಯನ್ನು ಸಭೆಯು ಒಪ್ಪಲಾಯಿತು.

ವಿಷಯ:25(21):– ಸದಸ್ಯರಾದ ಶ್ರೀಮತಿ:ಕಲೈಅರಸಿ ವಾರ್ಡ್ ನಂಬರ್:20ರವರು ಮನವಿ ಸಲ್ಲಿಸಿ ಹಾಲಹಳ್ಳಿಕೆರೆ ತಮಿಳು ಕಾಲೋನಿಯಲ್ಲಿರುವ ದೊಡ್ಡ ಮೋರಿಯಲ್ಲಿರುವ ಹೂಳು ತೆಗೆಸಿಕೊಡುವಂತೆ ಕೋರಿರುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

ತೀರ್ಮಾನ: 25(21):– ವಿಷಯ ಸಂಖ್ಯೆ 1 ರಲ್ಲಿ ತೀರ್ಮಾನವಾಗಿರುವಂತೆ ವಾರ್ಡ್‌ವಾರು ತಲಾ 10.00ಲಕ್ಷ ರೂ.ಗಳ ಅನುದಾನದಲ್ಲಿ ಕಾಮಗಾರಿ ಕೈಗೊಳ್ಳುವುದೆಂದು.

ವಿಷಯ:25(22):– ಮಂಡ್ಯ ನಗರಕ್ಕೆ ದಿನಾಂಕ:13–2–2009ರಂದು ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯ ಮಂತ್ರಿಗಳು ವಿವಿಧ ಕಾಮಗಾರಿಗಳ ಉದ್ಘಾಟನೆ ಹಾಗೂ ಸಕ್ಕರೆ ಕಾರ್ಖಾನೆಗೆ ಭೇಟಿ ನೀಡಲು ಆಗಮಿಸುತ್ತಿರುವುದರಿಂದ ಹಳೇ ಎಂ.ಸಿ.ರಸ್ತೆಯಲ್ಲಿ ಕಾಳಿಕಾಂಬ ದೇವಸ್ಥಾನದಿಂದ ದಕ್ಕರೆ ನಗರದ ಹೆಬ್ಬಾಳದವರೆಗೆ ಹೊಸದಾಗಿ ಲೈನ್ ಎಳೆದು ಬೀದಿ ದೀಪ (250ವ್ಯಾಟ್ಸ್ ಮೆಟಲ್ ಅಲಾಯಿಡ್)ಗಳನ್ನು ಅಳವಡಿಸುವ ಬಗ್ಗೆ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ**:25(22):– ತುರ್ತಾಗಿ ಬೀದಿ ದೀಪ ಕಾಮಗಾರಿಗಳನ್ನು ಕೈಗೊಳ್ಳಲು ತೀರ್ಮಾನಿಸಲಾಯಿತು. ಅಂದಾಜು ಮೊತ್ತ ರೂ.5ಲಕ್ಷ ಹಾಗೂ ಮಾನ್ಯ ಮುಖ್ಯ ಮಂತ್ರಿಗಳು ಮೈಸೂರು ಕಡೆಯಿಂದ ಆಗಮಿಸುತ್ತಿರುವುದರಿಂದ ಮೈಸೂರು ರಸ್ತೆ ಕಿರಗಂದೂರು ಗೇಟ್ ಬಳಿ ನಗರಸಭಾ ವತಿಯಿಂದ ಸ್ವಾಗತಿಸಲು ತೀರ್ಮಾನಿಸಲಾಯಿತು. ಸ್ವಾಗತ ಕಾರ್ಯಕ್ರಮಕ್ಕೆ ತಗಲುವ ವೆಚ್ಚವನ್ನು ಭರಿಸುವುದೆಂದು ಒಪ್ಪಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಸಹಿ:
ಅಧ್ಯಕ್ಷರು,
ನಗರಸಭೆ, ಮಂಡ್ಯ.

"ನಕಲು"

ಪೌರಾಯುಕ್ತರು,
ನಗರಸಭೆ, ಮಂಡ್ಯ.